# ಮಹಾನಗರ ಪಾಲಿಕೆ ಚುನಾವಣೆ
# ಚುನಾವಣಾ ವೀಕ್ಷಕರ ಮಾರ್ಗಸೂಚಿ ಕೈಪಿಡಿ

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**2018**

# ಮುನ್ನುಡಿ

ಚುನಾವಣೆಯು ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ಮಹತ್ವದ ಪ್ರಕ್ರಿಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತವಾಗಿ ನಡೆಸುವುದು ಒಂದು ಸವಾಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬಹಳ ತುರುಸಿನಿಂದ ಕೂಡಿರುತ್ತವೆ. ಚುನಾವಣೆಗಳಲ್ಲಿ ಹಣ ಬಲ, ತೋಳ್ಬಲ ಇತ್ಯಾದಿಗಳ ಪ್ರಭಾವವೂ ಹೆಚ್ಚಾಗುತ್ತಿದೆ.

ಚುನಾವಣೆಗಳನ್ನು ಮುಕ್ತ, ನ್ಯಾಯ ಸಮ್ಮತ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಮುಖ್ಯವಾಗಿ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಕರ್ನಾಟಕ ಸರ್ಕಾರ ನಗರಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳ ಚುನಾವಣೆಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣೆ ವೆಚ್ಚದ ಮಿತಿ ವಿಧಿಸಿ ಮತ್ತು ಚುನಾವಣೆ ವೆಚ್ಚದ ಲೆಕ್ಕ ಪತ್ರಗಳನ್ನು ಸಲ್ಲಿಸುವುದನ್ನು ಕಡ್ಡಾಯಗೊಳಿಸಿ ಕರ್ನಾಟಕ ನಗರಪಾಲಿಕೆ ಅಧಿನಿಯಮ 1976ಕ್ಕೆ ತಿದ್ದುಪಡಿ ಮಾಡಿ ಪ್ರಕರಣ 26ಎ, 26ಬಿ, 26ಸಿ ಗಳನ್ನು ಅಳವಡಿಸಲಾಗಿದೆ. ಸರ್ಕಾರ ಕರ್ನಾಟಕ ನಗರಪಾಲಿಕೆ (ಚುನಾವಣೆ) (ತಿದ್ದುಪಡಿ) ನಿಯಮಗಳು 2009ನ್ನು ರೂಪಿಸಿದೆ. ಅದರಂತೆ ಮಹಾನಗರಪಾಲಿಕೆಗಳ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯ ಗರಿಷ್ಠ ವೆಚ್ಚವನ್ನು 5–00 ಲಕ್ಷ (ಐದು ಲಕ್ಷ) ರೂ.ಗಳ ಹಾಗೂ ಇತರೆ ನಗರಪಾಲಿಕೆಗಳಿಗೆ 3–00 ಲಕ್ಷ(ಮೂರು ಲಕ್ಷ) ರೂ.ಗಳ ಮಿತಿಯನ್ನು ನಿಗದಿಪಡಿಸಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿ ಮತದಾನ ನಡೆಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ತನ್ನ ಮತವನ್ನು ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ತನ್ನ ಇಚ್ಛೆಯಂತೆ ಮತ ಚಲಾಯಿಸಲು ಅನುವಾಗುವಂತೆ ಮತಪತ್ರದಲ್ಲಿ/ಅಂಚೆ ಮತಪತ್ರದಲ್ಲಿ/ಇ.ವಿ.ಎಂ.ನಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೊನೆಯ ಸಾಲು ಅಥವಾ ಕೊನೆಯ ಪ್ಯಾನೆಲ್‌ನಲ್ಲಿ 'None of the above' (NOTA)/"ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ) ಎಂದು ಮುದ್ರಿಸಿ ಪ್ರತ್ಯೇಕ ಕಾಲಂನಲ್ಲಿ ಅವಕಾಶ ಕಲ್ಪಿಸಲು ಆದೇಶಿಸಿದೆ.

ಆಯೋಗವು ಮೊದಲ ಬಾರಿಗೆ ನಗರಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಒಂದೇ ವಾರ್ಡಿನಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಸ್ಪರ್ಧಿಸುತ್ತಿರುವುದನ್ನು ಆಯೋಗವು ಗಮನಿಸಿದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯನ್ನು ಗುರುತಿಸಲು ಅನುವಾಗುವಂತೆ ಅವರ ಹೆಸರುಗಳ ಮುಂದೆ ಅವರ ವೃತ್ತಿ ಅಥವಾ ವಿಳಾಸ ಇತ್ಯಾದಿಗಳನ್ನು ತೋರಿಸುವಂತೆ

ಸೂಚನೆಗಳನ್ನು ನೀಡಲಾಗಿದೆ ಹಾಗೂ ಮತದಾರರಿಗೆ ಮತದಾನದ ಸಮಯದಲ್ಲಿ ಗೊಂದಲ ಉಂಟಾಗುವುದನ್ನು ತಪ್ಪಿಸಲು ಮತಪತ್ರಗಳಲ್ಲಿ ಅಭ್ಯರ್ಥಿಗಳ ಹೆಸರಿನ ಜೊತೆಗೆ ಅವರ ಭಾವಚಿತ್ರವನ್ನು ಮುದ್ರಿಸಲು ಆದೇಶಿಸಲಾಗಿದೆ.

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಾವು ಸಲ್ಲಿಸುವ ನಾಮಪತ್ರದೊಂದಿಗೆ ಸಲ್ಲಿಸುವ ಘೋಷಣಾ ಪತ್ರದಲ್ಲಿ ಅವರ ವೈಯಕ್ತಿಕ ಮಾಹಿತಿಗಳು, ಆದಾಯ ತೆರಿಗೆ ಮಾಹಿತಿಗಳು, ವೃತ್ತಿ ಮತ್ತು ಆದಾಯದ ಮೂಲಗಳಿಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳನ್ನು ಸೇರ್ಪಡೆ ಮಾಡಿ ಆದೇಶವನ್ನು ಹೊರಡಿಸಲಾಗಿದೆ.

ಚುನಾವಣಾ ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ನಿಗಾ ಇಡಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಕರಿಸಲು ತಮ್ಮನ್ನು ಶಾಸನಬದ್ದವಾಗಿ ಚುನಾವಣಾ ವೀಕ್ಷಕರನ್ನಾಗಿ/ಚುನಾವಣಾ ವೆಚ್ಚ ವೀಕ್ಷಕರನ್ನಾಗಿ ನೇಮಿಸಲಾಗಿದೆ. ತಾವು ಈ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಿರ್ವಹಿಸಿ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಲು ಸಹಕರಿಸುತ್ತೀರೆಂದು ಭಾವಿಸಲಾಗಿದೆ. ತಾವು ನಿರ್ವಹಿಸಬೇಕಾಗಿರುವ ಕಾರ್ಯಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ.

ವೀಕ್ಷಕರಾಗಿ ಕಾರ್ಯ ನಿರ್ವಹಿಸಲು ಅಗತ್ಯವಾದ ವೀಕ್ಷಕರ ಕೊಠಡಿ, ಸಹಾಯಕ ಸಿಬ್ಬಂದಿ, ವಾಹನ, ಪೀಠೋಪಕರಣ ಇತ್ಯಾದಿಗಳನ್ನು ತಮಗೆ ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಒದಗಿಸುವರು. ವೀಕ್ಷಕರಾಗಿ ತಮ್ಮ ಕಾರ್ಯನಿರ್ವಹಣೆಯು ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕದಿಂದ ಪ್ರಾರಂಭವಾಗಿ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ಅಂತಿಮಗೊಳ್ಳುತ್ತದೆ.

ತಾವು ಚುನಾವಣಾ ವೀಕ್ಷಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿ ಚುನಾವಣೆಯು ನಿಷ್ಪಕ್ಷಪಾತ ಹಾಗೂ ನ್ಯಾಯ ಸಮ್ಮತವಾಗಿ ನಡೆಯಲು ತಮ್ಮ ಶಕ್ತಿಮೀರಿ ಶ್ರಮಿಸಿ ಆಯೋಗಕ್ಕೆ ಸಹಕರಿಸುತ್ತೀರೆಂದು ಆಶಿಸುತ್ತೇನೆ.

**ಪಿ.ಎನ್.ಶ್ರೀನಿವಾಸಚಾರಿ**
ಆಯುಕ್ತರು
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

# ಪರಿವಿಡಿ


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| 1. | ಹಿನ್ನೆಲೆ | 1 |
| 2. | ನೇಮಕಾತಿಗೆ ಶಾಸನಬದ್ಧ ಆಧಾರ | 1 |
| 3. | ಚುನಾವಣಾ ವೀಕ್ಷಕರ ಕರ್ತವ್ಯಗಳ ಸಂಕ್ಷಿಪ್ತ ಮೇಲು ನೋಟ | 1 |
| 4. | ಚುನಾವಣಾ ವೀಕ್ಷಕರ ಪಾತ್ರ | 2 |
| 5. | ನಾಮಪತ್ರ ಸಲ್ಲಿಕೆ, ನಾಮಪತ್ರ ಹಿಂಪಡೆಯುವುದು, ನಾಮಪತ್ರಗಳ ಪರಿಶೀಲನೆ ಮತ್ತು ಚುನಾವಣಾ ಚಿಹ್ನೆಗಳ ಹಂಚಿಕೆ | 2 |
| 6. | ಚುನಾವಣೆಗೆ ಸಂಬಂಧಿಸಿದ ಇತರೆ ವಿಷಯಗಳು | 3 |
| 7. | ಚುನಾವಣಾ ಪ್ರಚಾರದ ಅವಧಿಯಲ್ಲಿ ನೀತಿ ಸಂಹಿತೆ | 3 |
| 8. | ಅಭ್ಯರ್ಥಿಗಳ ಚುನಾವಣೆ ವೆಚ್ಚಗಳ ಬಗ್ಗೆ ನಿಗಾವಹಿಸುವುದು | 3 |
| 9. | ಮತದಾನಕ್ಕೆ ಮುಂಚಿನ ಪೂರ್ವ ಸಿದ್ಧತೆ ವ್ಯವಸ್ಥೆಗಳು | 4 |
| 10. | ಮತದಾನ ದಿನದಂದು ಮೇಲ್ವಿಚಾರಣೆ/ ನಿರ್ವಹಣೆ | 4 |
| 11. | ಮತದಾನದ ನಂತರದ ಕಾರ್ಯಗಳ ಮೇಲ್ವಿಚಾರಣೆ | 5 |
| 12. | ಎಣಿಕೆ | 5 |
| 13. | ಚುನಾವಣಾ ವೀಕ್ಷಕರಿಗೆ ಚುನಾವಣೆ ಕೆಲಸಕಾರ್ಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲು ಸಭೆ | 5 |
| 14. | ಚುನಾವಣಾ ವೀಕ್ಷಕರ ಪ್ರವಾಸ ಮತ್ತು ಕೇಂದ್ರ ಸ್ಥಾನದಲ್ಲಿ ಹಾಜರಿರದಿರುವ ಬಗ್ಗೆ | 6 |
| 15. | ಚುನಾವಣಾ ವೀಕ್ಷಕರು ಆಯೋಗಕ್ಕೆ ಸಲ್ಲಿಸಬೇಕಾದ ವರದಿಗಳು | 6 |
| 16. | ವೀಕ್ಷಕರಿಗೆ ಅಂಚೆ ಮತಪತ್ರ | 6 |
| 17. | ವಾರ್ಡುಗಳಿಗೆ ಚುನಾವಣಾ ವೀಕ್ಷಕರ ಆಗಮನ | 6 |
| 18. | ವೀಕ್ಷಕರೊಂದಿಗೆ ಡಿ.ಇ.ಓ., ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿ ಮುಖಾಮುಖಿ ಸಂವಾದ | 7 |
| 19. | ವೀಕ್ಷಕರು ಪರಿವೀಕ್ಷಿಸತಕ್ಕ ಅಂಶಗಳು | 7 |
| 20. | ನಾಮಪತ್ರಗಳ ಪರಿಶೀಲನೆ | 7 |
| 21. | ಚಿಹ್ನೆಗಳ ಹಂಚಿಕೆ | 8 |
| 22. | ಮತದಾರರ ಪಟ್ಟಿ | 9 |
| 23. | ಅಭ್ಯರ್ಥಿಗಳೊಂದಿಗೆ ಸಭೆ ನಡೆಸುವುದು | 9 |
| 24. | ಚುನಾವಣಾ ಕ್ಷೇತ್ರಗಳಿಗೆ ಹಾಗೂ ಮತಗಟ್ಟೆಗಳಿಗೆ ಭೇಟಿ | 9 |
| 25. | ಕಾನೂನು ಸುವ್ಯವಸ್ಥೆ ಪಾಲನೆಗೆ ತಯಾರಿಗಳ ಬಗ್ಗೆ ಸಮಗ್ರ ಪರಿಶೀಲನೆ | **10** |
| 26. | ಮಾದರಿ ನೀತಿ ಸಂಹಿತೆ ಅನುಷ್ಠಾನದ ಪರಿವೀಕ್ಷಣೆ | 10 |
| 27. | ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಲು/ ಅನುಷ್ಠಾನಕ್ಕೆ ತರಲು ಚುನಾವಣಾ ವೀಕ್ಷಕರ ಮಾರ್ಗ/ ದೃಷ್ಟಿಕೋನ | 10 |
| 28. | ಅಭ್ಯರ್ಥಿಗಳ/ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರದ ಮೇಲೆ ನಿಗಾವಹಿಸುವುದು | 12 |
| 29. | ಚುನಾವಣೆ ವೆಚ್ಚಗಳ ಬಗೆಗಿನ ವಿವಿಧ ಸೂಚನೆಗಳ ಸಂಕ್ಷಿಪ್ತ ಮಾಹಿತಿಗಳು | 12 |
| 30. | ನೋಡಲ್ ಅಧಿಕಾರಿಗಳ ಕರ್ತವ್ಯಗಳು | 13 |
| 31. | ಮತಗಟ್ಟೆ ಸಿಬ್ಬಂದಿ ನೇಮಕಾತಿ, ತರಬೇತಿ ಮತ್ತು ತಯಾರಿ | 15 |
| 32. | ವಿದ್ಯುನ್ಮಾನ ಮತಯಂತ್ರಗಳು | 16 |

| | | |
|---|---|---|
| **33.** | ಮತದಾನ ದಿನಾಂಕಕ್ಕೆ ಸಂಬಂಧಿಸಿದ ತಯಾರಿ | 16 |
| **34.** | ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ | 16 |
| **35.** | ಮೈಕ್ರೋ ಅಬ್ಸರ್‌ವರ್ಸ್ | 16 |
| **36.** | ವಿಶೇಷ ವೀಕ್ಷಕರು | 17 |
| **37.** | ಮತದಾನ ದಿನದ ಚಟುವಟಿಕೆಗಳು | 17 |
| **38.** | ಡಿಮಸ್ಟರಿಂಗ್ ಕೇಂದ್ರದಲ್ಲಿ ವಿಶೇಷ ಕೌಂಟರುಗಳನ್ನು ಸ್ಥಾಪಿಸುವ ಬಗ್ಗೆ | 18 |
| **39.** | ಮತದಾರರ ರಿಜಿಸ್ಟರ್ ಮತ್ತು ಇತರೆ ದಾಖಲೆಗಳ ಪರಿಶೀಲನೆ | 18 |
| **40.** | ಮರು ಮತದಾನ ಮತ್ತು ಮತದಾನ ಮುಂದೂಡಿದ ಪ್ರಕರಣಗಳು | 18 |
| **41.** | ಮತದಾನ ಮುಕ್ತಾಯದ ವರದಿ | 18 |
| **42.** | ಮತಗಳ ಎಣಿಕೆ | 19 |
| **43.** | ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೈಟಿಗೆ ಅಳವಡಿಸುವುದು | 19 |
| **44.** | ಚುನಾವಣೆ ವೆಚ್ಚದ ಲೆಕ್ಕಪತ್ರಗಳು | 20 |
| **45.** | ಮಾಡಬೇಕಾದ್ದು ಮತ್ತು ಮಾಡಬಾರದವುಗಳು (Do's and Don'ts) | 26 |
| ಅನುಬಂಧ–1 | ಚೆಕ್‌ಲಿಸ್ಟ್ | 28 |
| ಅನುಬಂಧ–2 | ವೀಕ್ಷಕರ ಮೊದಲನೇ ವರದಿ | 34 |
| ಅನುಬಂಧ–3 | ವೀಕ್ಷಕರ ಎರಡನೇ ವರದಿ | 37 |
| ಅನುಬಂಧ–4 | ವೀಕ್ಷಕರ ಮೂರನೇ ವರದಿ | 38 |
| ಅನುಬಂಧ–5 | ವೀಕ್ಷಕರ ನಾಲ್ಕನೇ ವರದಿ | 40 |
| ಅನುಬಂಧ–6 | ಪೊಲೀಸರಿಂದ ಮಾಹಿತಿಯನ್ನು ಪಡೆಯುವುದು | 41 |
| ಅನುಬಂಧ–7 | ನೋಡಲ್ ಆಫೀಸರ್ಸ್ ಚೆಕ್ ಮೆಮೋ | 47 |
| ಅನುಬಂಧ–8 | Extract of Karnataka Municipalities Act 1964 (Extract of related sections) and Karnataka Municipalities (Election of councillors) amendment Rules, 2010 (Extract of related rules) | 48 |
| ಅನುಬಂಧ–9 | The Karnataka open places (prevention of Disfigurement) Act 1981 (Karnataka Act No. 35 of 1982) (Extract of related sections) | 57 |
| ಅನುಬಂಧ–10 | ನಗರಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿ ಚುನಾವಣೆಗಳಲ್ಲಿ ಮತದಾರನು ತನ್ನ ಮತವನ್ನು ಸ್ಪರ್ಧಿಸಿರುವ ಯಾವುದೇ ಅಭ್ಯರ್ಥಿಗೆ ನೀಡದೆಯೇ ತನ್ನ ಇಚ್ಛಾನುಸಾರ "ಮೇಲ್ಕಂಡ ಯಾರೂ ಅಲ್ಲ" 'None of the above' (NOTA)/"ಮೇಲ್ಕಡ ಯಾರೂ ಅಲ್ಲ" (ಮೇ ಯಾ ಅ) ಗೆ ತನ್ನ ಮತವನ್ನು ಚಲಾಯಿಸಲು ಅವಕಾಶ ಕಲ್ಪಿಸಿರುವ ಕುರಿತು ಆದೇಶ. | 60 |
| ಅನುಬಂಧ–11 | ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಳಸುವ ಮತಪತ್ರಗಳಲ್ಲಿ ಅಭ್ಯರ್ಥಿಯ ಭಾವಚಿತ್ರವನ್ನು ಮುದ್ರಿಸುವ ಕುರಿತು ಆದೇಶ. | 62 |
| ಅನುಬಂಧ–12 | ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಾವು ಸಲ್ಲಿಸುವ ನಾಮಪತ್ರದೊಂದಿಗೆ ಸಲ್ಲಿಸುವ ಘೋಷಣಾ ಪತ್ರದಲ್ಲಿ ಅವರ ವೈಯಕ್ತಿಕ ಮಾಹಿತಿಗಳು, ಆದಾಯ ತೆರಿಗೆ ಮಾಹಿತಿಗಳು, ವೃತ್ತಿ ಮತ್ತು ಆದಾಯದ ಮೂಲಗಳಿಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳನ್ನು ಸೇರ್ಪಡೆ ಮಾಡಿ ಹೊರಡಿಸಿರುವ ಸೇರ್ಪಡೆ ಆದೇಶ. | 71 |

**1) ಹಿನ್ನೆಲೆ**

ಸರ್ಕಾರ ನಗರಪಾಲಿಕೆ ಕಾಯ್ದೆಗೆ ಹಾಗೂ ಚುನಾವಣೆ ನಿಯಮಗಳಿಗೆ ತಿದ್ದುಪಡಿ ಮಾಡಿ ಅಭ್ಯರ್ಥಿಗಳಿಗೆ ಚುನಾವಣಾ ವೆಚ್ಚದ ಗರಿಷ್ಠ ಮಿತಿಯನ್ನು ನಿಗದಿಪಡಿಸಿರುವುದಲ್ಲದೆ ಚುನಾವಣೆ ವೆಚ್ಚಗಳ ಲೆಕ್ಕಪತ್ರ ನಿಗದಿತ ನಮೂನೆಯಲ್ಲಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ. ಆದುದರಿಂದ ಅಭ್ಯರ್ಥಿಗಳ ಚುನಾವಣೆ ವೆಚ್ಚ ಹಾಗೂ ಪ್ರಚಾರ ಇತ್ಯಾದಿ ಎಲ್ಲಾ ಕಾರ್ಯಗಳನ್ನು ಉಸ್ತುವಾರಿ ಮಾಡಿ ಚುನಾವಣೆಗಳಲ್ಲಿ ಅಕ್ರಮಗಳನ್ನು ತಡೆಗಟ್ಟಿ ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ, ನ್ಯಾಯಸಮ್ಮತವಾಗಿ ಹಾಗೂ ಶಾಂತಿಯುತವಾಗಿ ನಡೆಸಲು ಆಯೋಗಕ್ಕೆ ಸಹಕರಿಸಲು ಹಿರಿಯ ಸರ್ಕಾರಿ ಅಧಿಕಾರಿಗಳನ್ನು ಚುನಾವಣಾ ವೀಕ್ಷಕರನ್ನಾಗಿ ನೇಮಿಸುವುದು ಸೂಕ್ತವಾಗಿರುತ್ತದೆಂದು ರಾಜ್ಯ ಚುನಾವಣಾ ಆಯೋಗ ಪರಿಗಣಿಸಿದೆ.

**2) ನೇಮಕಾತಿಗೆ ಶಾಸನಬದ್ಧ ಆಧಾರ**

ಸಂವಿಧಾನದ ಪರಿಚ್ಛೇದ 243ಜೆಡ್‌ಎ ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976ರ ಪ್ರಕರಣ 39ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಮ್ಮನ್ನು ಮಹಾನಗರಪಾಲಿಕೆ ಚುನಾವಣೆಗೆ ಚುನಾವಣಾ ವೀಕ್ಷಕರನ್ನಾಗಿ ನೇಮಿಸಿದೆ. ತಾವು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನಗಳನುಸಾರ ಚುನಾವಣೆ ಪ್ರಕ್ರಿಯೆಗಳ ಮೇಲ್ವಿಚಾರಣೆ, ಸ್ಪರ್ಧಿಸಿರುವ ಅಭ್ಯರ್ಥಿಗಳ ಚುನಾವಣಾ ಪ್ರಚಾರ, ರಾಜಕೀಯ ಸಮಾವೇಶ, ಚುನಾವಣಾ ಪ್ರಚಾರದ ಮೆರವಣಿಗೆಗಳು ಹಾಗೂ ಸದಾಚಾರ ಸಂಹಿತೆಗಳ ಉಲ್ಲಂಘನೆ ಮುಂತಾದವುಗಳ ಬಗ್ಗೆ ನಿಗಾವಹಿಸುವುದು ಮತ್ತು ಅಭ್ಯರ್ಥಿಗಳ ಚುನಾವಣೆ ವೆಚ್ಚಗಳ ಪರಿಶೀಲನೆ ಇತ್ಯಾದಿ ಹಾಗೂ ಆಯೋಗವು ಸೂಚಿಸುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದಾಗಿರುತ್ತದೆ.

**3) ಚುನಾವಣಾ ವೀಕ್ಷಕರ ಕರ್ತವ್ಯಗಳ ಸಂಕ್ಷಿಪ್ತ ಮೇಲು ನೋಟ**

ನೀವು ದೀರ್ಘಾವಧಿ ಸೇವೆ ಸಲ್ಲಿಸಿರುವವರಾದುದರಿಂದ ಆಡಳಿತದಲ್ಲಿ ಸಾಕಷ್ಟು ಅನುಭವ ಇರುವುದರಿಂದ ಚುನಾವಣೆ ಪ್ರಕ್ರಿಯೆಗಳ ದಕ್ಷತೆ ಬಗ್ಗೆ ಸಮರ್ಥವಾಗಿ ಉಸ್ತುವಾರಿ ಮಾಡಲು ಸಾಧ್ಯವಿರುತ್ತದೆ. ಆದುದರಿಂದ ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ, ನಿಷ್ಪಕ್ಷಪಾತ ಹಾಗೂ ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಆಯೋಗಕ್ಕೆ ನೆರವಾಗುವಿರೆಂದು ಆಶಿಸಲಾಗಿದೆ. ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು ಗಮನಿಸಲು ನೀವು ಆಯೋಗದ "ಕಣ್ಣು" ಮತ್ತು "ಕಿವಿ" ಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಕ್ಷೇತ್ರದಲ್ಲಿನ ವಿದ್ಯಮಾನಗಳನ್ನು ಆಯೋಗಕ್ಕೆ ತಿಳಿಸುವುದು, ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಮತ್ತು ಮತದಾರರು ಚುನಾವಣೆ ಕಾಯ್ದೆ, ಕಾನೂನು ಮತ್ತು ಕಾರ್ಯವಿಧಾನ, ನಿರ್ದೇಶನ ಹಾಗೂ ಸೂಚನೆಗಳನ್ನು ಯಾವುದೇ ಲೋಪಕ್ಕೆ ಅವಕಾಶವಿಲ್ಲದಂತೆ ಪಾಲಿಸುವ ಬಗ್ಗೆ ನಿಗಾವಹಿಸುವುದು. ತಾವು ಆಯೋಗದ ಕಿವಿ ಮತ್ತು ಕಣ್ಣುಗಳಂತೆ ಕೆಲಸ ನಿರ್ವಹಿಸಬೇಕೇ ಹೊರತು ಆಯೋಗದ ನಿರ್ದೇಶನವಿಲ್ಲದೆ ಯಾವುದೇ ನಿರ್ಣಯಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ ಎಂಬುದನ್ನು ಸದಾ ಗಮನದಲ್ಲಿರಿಸಿಕೊಂಡಿರಬೇಕು. ತಮಗೆ ದೊರೆತ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ, ಗಮನಿಸಿದ ಅಂಶಗಳನ್ನು ಗೌಪ್ಯವಾಗಿರಿಸಿ ಆಯೋಗಕ್ಕೆ ಮಾತ್ರ ವರದಿ ಮಾಡಬೇಕು. ಯಾವುದೇ ಏಜೆನ್ಸಿ ಅಥವಾ ಮಾಧ್ಯಮಕ್ಕೆ ಯಾವುದೇ ಕಾರಣಕ್ಕೂ ಮಾಹಿತಿಗಳನ್ನು ನೀಡತಕ್ಕದ್ದಲ್ಲ. ವೀಕ್ಷಕರು ನೀಡುವ ಮಾಹಿತಿ, ಗಮನಿಸಿದ ಅಂಶಗಳ ಬಗ್ಗೆ ಆಯೋಗವು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ವೀಕ್ಷಕರು ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಇವರೊಂದಿಗೆ ಚುನಾವಣೆ ಪ್ರಕ್ರಿಯೆಗಳ ಮತ್ತು ಚುನಾವಣೆಗಾಗಿ ಮಾಡಿರುವ ವ್ಯವಸ್ಥೆಗಳ ಬಗ್ಗೆ ಚರ್ಚಿಸುವುದು. ತಾವು ಚುನಾವಣೆ ಪ್ರಕ್ರಿಯೆಗಳಲ್ಲಿ ಲೋಪಗಳನ್ನು/ತಪ್ಪುಗಳನ್ನು ಎತ್ತಿ ತೋರಿಸುವ ಬದಲು ಚುನಾವಣೆಗಳನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ದಿಸೆಯಲ್ಲಿ ಚುನಾವಣಾಧಿಕಾರಿಗಳಿಗೆ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಬೇಕು. ವೀಕ್ಷಕರು ತಮ್ಮ ವರದಿಗಳನ್ನು ಆಯೋಗಕ್ಕೆ ಮಾತ್ರ ಕಳುಹಿಸಬೇಕು DEO/RO ಗಳಿಗೆ ಸಹ ವರದಿ ಪ್ರತಿಯನ್ನು ನೀಡತಕ್ಕದ್ದಲ್ಲ.

#### 4) ಚುನಾವಣಾ ವೀಕ್ಷಕರ ಪಾತ್ರ:

ಆಯೋಗವು ಪ್ರತಿ ಚುನಾವಣಾಧಿಕಾರಿಗೆ ಕ್ಷೇತ್ರ ವ್ಯಾಪ್ತಿಯ ಚುನಾವಣಾ ಕಾರ್ಯಗಳ ವೀಕ್ಷಣೆಗೆ ಒಬ್ಬ ವೀಕ್ಷಕರನ್ನು ನೇಮಿಸುತ್ತಿದೆ. ವೀಕ್ಷಕರು ತಮಗೆ ನೇಮಿಸಿರುವ ವಾರ್ಡುಗಳ ಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ಸಂಬಂಧ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸಬೇಕಿದೆ.

1. ಆಯೋಗದ ಸೂಚನೆಯ ಮೇರೆಗೆ ನಾಮ ಪತ್ರ ಸಲ್ಲಿಸುವ ಪ್ರಕ್ರಿಯೆಯಲ್ಲಿ ಮೇಲ್ವಿಚಾರಣೆ ಮಾಡುವುದು, ನಾಮಪತ್ರಗಳ ಪರಿಶೀಲನೆ, ಉಮೇದುವಾರಿಕೆಯನ್ನು ಹಿಂಪಡೆಯುವಿಕೆಗಳ ಬಗ್ಗೆ ಮೇಲ್ವಿಚಾರಣೆ ಮಾಡಿ ಯಾವುದೇ ನಿಯಮಬಾಹಿರ/ಅಕ್ರಮಗಳು ನಡೆಯುತ್ತಿರುವುದಾಗಿ ಕಂಡುಬಂದಲ್ಲಿ ಆ ವಿಚಾರವನ್ನು ಆಯೋಗಕ್ಕೆ ನೇರವಾಗಿ ವರದಿ ಮಾಡುವುದು.

2. ನಾಮಪತ್ರ ಪ್ರಕ್ರಿಯೆಯ ಬಗ್ಗೆ ಅಥವಾ ಚಿಹ್ನೆಗಳ ಹಂಚಿಕೆಯ ಬಗ್ಗೆ ಅಭ್ಯರ್ಥಿಗಳಿಂದ/ರಾಜಕೀಯ ಪಕ್ಷಗಳಿಂದ ದೂರು/ಅಹವಾಲುಗಳಿದ್ದು ಪರಿಹಾರ ಕಾಣದೇ ಇರುವಂತಹ ಪ್ರಕರಣಗಳಿದ್ದಲ್ಲಿ ಈ ಬಗ್ಗೆ ನಾಮಪತ್ರ ಪ್ರಕ್ರಿಯೆಯ ವಿಡಿಯೋ ಚಿತ್ರಣವನ್ನು ಪರಿಶೀಲಿಸಿ, ಸೂಕ್ತ ವಿಚಾರಣೆ ನಡೆಸುವುದು.

3. ಸದಾಚಾರ ಸಂಹಿತೆಯ ಉಲ್ಲಂಘನೆಯ ಪ್ರಕರಣಗಳ ಬಗ್ಗೆ, ಸಭೆಗಳ ಬಗ್ಗೆ ವಿಡಿಯೋ ಕ್ಲಿಪ್ಪಿಂಗ್ ಗಳನ್ನು ವೀಕ್ಷಿಸಿ, ಸಾಧ್ಯವಿದ್ದಲ್ಲಿ/ಅವಶ್ಯವಿದ್ದಲ್ಲಿ ಅತೀ ಮುಖ್ಯವಾದ ಸಭೆ/ ಮೆರವಣಿಗೆಗಳಿಗೆ ಭೇಟಿ ನೀಡಿ ನೇರವಾಗಿ ವಿಷಯವನ್ನು ಸಂಗ್ರಹಿಸುವುದು. ಸಾರ್ವಜನಿಕ ಆಸ್ತಿ/ಕಟ್ಟಡಗಳನ್ನು ವಿರೂಪಗೊಳಿಸುವುದನ್ನು ತಡೆಗಟ್ಟುವ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು, ಅಭ್ಯರ್ಥಿಗಳ ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಪರಿಶೀಲಿಸುವುದು, ಸೂಕ್ಷ್ಮ ವೀಕ್ಷಕರುಗಳಿಗೆ (Microe Observers) ತರಬೇತಿ ನೀಡುವಂತಹ ಇತರೆ ಕರ್ತವ್ಯವನ್ನು ನಿರ್ವಹಿಸುವುದು.

4. ಸರ್ವೀಸ್ ಮತದಾರರಿಗೆ ನಿಯಮಿತವಾಗಿ ಅಂಚೆ ಮತಪತ್ರಗಳ ರವಾನೆಯಾಗಿರುವ ಬಗ್ಗೆ, ಮತದಾನ ಸಿಬ್ಬಂದಿಗಳ ನಿಯೋಜನೆ, ಮತ್ತು ಅವರುಗಳಿಗೆ ಚುನಾವಣಾ ಸಾಮಗ್ರಿಗಳ/ಚುನಾವಣಾ ಕಾಗದಪತ್ರಗಳನ್ನು ವಿತರಿಸಲು ಸೂಕ್ತ ಕೌಂಟರ್ ಗಳ ಏರ್ಪಾಡು, ಪೋಲೀಸ್ ಮತ್ತು ಸೆಕ್ಯೂರಿಟಿ ಸಿಬ್ಬಂದಿಗಳ ವ್ಯವಸ್ಥೆಗಳನ್ನು ಆಯೋಗದ ನಿರ್ದೇಶನಗಳಂತೆ ನಿರ್ವಹಿಸಿರುವ ಬಗ್ಗೆ ಮೇಲ್ವಿಚಾರಣೆ.

5. ಮತದಾನಾಧಿಕಾರಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸುವ ಬಗ್ಗೆ ರ್‍ಯಾಂಡಮೈಜೇಶನ್ (Randomization) ಕ್ರಿಯೆಯಲ್ಲಿ ಭಾಗವಹಿಸಿ ಪರಿಶೀಲನೆ ನಡೆಸುವುದು.

ಮೇಲ್ಕಂಡ ಪ್ರಕ್ರಿಯೆಗಳಲ್ಲಿ ನೇರವಾಗಿ ಮೇಲ್ವಿಚಾರಣೆ ಮಾಡುವುದಲ್ಲದೆ, ಇತರೆ ಚುನಾವಣೆಗೆ ಸಂಬಂಧಪಟ್ಟ, ಎಲ್ಲಾ ಹಂತಗಳನ್ನು ವೀಕ್ಷಿಸಿ, ಅದರ ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕಿರುತ್ತದೆ. ವೀಕ್ಷಕರು ಪರಿಶೀಲಿಸಬೇಕಾದ ಕೆಲವು ಪ್ರಕ್ರಿಯೆಗಳ ಬಗ್ಗೆ ಈ ಕೆಳಕಂಡ ಉದಾಹರಣೆಗಳನ್ನು ನೀಡಿದೆ.

#### 5) ನಾಮಪತ್ರ ಸಲ್ಲಿಕೆ, ನಾಮಪತ್ರ ಹಿಂಪಡೆಯುವುದು, ನಾಮಪತ್ರಗಳ ಪರಿಶೀಲನೆ ಮತ್ತು ಚುನಾವಣಾ ಚಿಹ್ನೆಗಳ ಹಂಚಿಕೆ.

1. ನಾಮ ಪತ್ರ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳೊಂದಿಗೆ ಇರಬಹುದಾದ ಬೆಂಬಲಿಗರು.
2. ನಾಮ ಪತ್ರವನ್ನು ಪರಿಶೀಲಿಸಿ ಅಂಗೀಕರಿಸುವ ಅಥವಾ ತಿರಸ್ಕರಿಸುವ ನಿರ್ಣಯವನ್ನು ಕೈಗೊಳ್ಳುವ ಅಧಿಕಾರ ಚುನಾವಣಾಧಿಕಾರಿಗಳಿಗೆ ಮಾತ್ರವಿದ್ದು ಅವರು ಒಬ್ಬ ನ್ಯಾಯಾಧೀಶನಂತೆ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅವರು ಆಯೋಗವು ನೀಡುವ ಸೂಚನೆ/ನಿರ್ದೇಶನಗಳನ್ನು ತಿಳಿದುಕೊಂಡಿದ್ದು ಚಾಲ್ತಿಯಲ್ಲಿರುವ ಚುನಾವಣಾ ಚಿಹ್ನೆಗಳ ಆದೇಶಗಳನ್ನು ಹೊಂದಿರಬೇಕಾಗಿರುತ್ತದೆ. ಚುನಾವಣಾ ವೀಕ್ಷಕರು ಚುನಾವಣಾಧಿಕಾರಿಯು ನಡೆಸುವ ನಾಮಪತ್ರಗಳ ಪರಿಶೀಲನೆ ಪ್ರಕ್ರಿಯೆಯನ್ನು ವೀಕ್ಷಿಸಿ ಯಾವುದೇ ಅಕ್ರಮಗಳು ನಡೆಯುತ್ತಿದ್ದಲ್ಲಿ, ಅದನ್ನು ಆಯೋಗಕ್ಕೆ ವರದಿ ಮಾಡುವುದು. ವೀಕ್ಷಕರು ಯಾವುದೇ ಸಲಹೆ /ಸೂಚನೆಗಳನ್ನು ಚುನಾವಣಾಧಿಕಾರಿಗಳಿಗೆ ನೀಡುವಂತಿಲ್ಲ. ನಾಮಪತ್ರದ ವಿಚಾರದಲ್ಲಿ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಅದನ್ನು ಕಾನೂನಿನಡಿಯಲ್ಲಿ ಪರಿಶೀಲಿಸಲು ಕಾಲಾವಕಾಶ ಅಗತ್ಯವಿದ್ದಲ್ಲಿ ಕಾಲಾವಕಾಶದ ಬಗ್ಗೆ ನೆನಪಿಸಬಹುದು.

3. ಚುನಾವಣೆ ಚಿಹ್ನೆಗಳ ಹಂಚುವಿಕೆ ವಿಚಾರದಲ್ಲಿ ಚುನಾವಣಾಧಿಕಾರಿಯು ಕಾನೂನನ್ನು ಮತ್ತು ಆಯೋಗದ ಎಲ್ಲಾ ನಿರ್ದೇಶನಗಳನ್ನು ತಿಳಿದುಕೊಂಡಿರಬೇಕು.

**6) ಚುನಾವಣೆಗೆ ಸಂಬಂಧಿಸಿದ ಇತರೆ ವಿಷಯಗಳು**

1. ಮತದಾರರ ಪಟ್ಟಿಯಲ್ಲಿ ತೀವ್ರತರಹದ ಲೋಪದೋಷಗಳಿದ್ದಲ್ಲಿ ಅದನ್ನು ಪರಿಶೀಲಿಸಿ ಆಯೋಗಕ್ಕೆ ವರದಿ ಮಾಡಬೇಕೇ ವಿನಹ: ಯಾವುದೇ ತಿದ್ದುಪಡಿಗೆ ನೇರವಾಗಿ ಕ್ರಮವಹಿಸಲು ಅವಕಾಶವಿರುವುದಿಲ್ಲ.
2. ತಿದ್ದುಪಡಿಗೆ ಅವಕಾಶವಿಲ್ಲದಿದ್ದರೂ ಮೃತರಾದ ಮತದಾರರ, ಖೊಟ್ಟಿ/ಬೋಗಸ್ ಮತದಾರರ ಬಗ್ಗೆ ಪ್ರತ್ಯೇಕ ಪಟ್ಟಿಯನ್ನು ಮತಗಟ್ಟೆವಾರು ತಯಾರಿಸಿ ಅದನ್ನು ಮತದಾನದ ದಿನಾಂಕದಂದು ಮತದಾರರ ಗುರುತು ಪರಿಶೀಲನೆಗೆ ಉಪಯೋಗಿಸಬಹುದಾಗಿರುತ್ತದೆ.
3. ರಾಜಕೀಯ ಪಕ್ಷಗಳಿಗೆ/ಅಭ್ಯರ್ಥಿಗಳಿಗೆ ನೀಡಿರುವ ಮತದಾರರ ಪಟ್ಟಿಗಳು ಮತ್ತು ಮತದಾನಕ್ಕೆ ಉಪಯೋಗಿಸುವ ಮತದಾರರ ಪಟ್ಟಿಯು ಒಂದೇ ಆಗಿರತಕ್ಕದ್ದು. ಯಾವುದೇ ತಿದ್ದುಪಡಿ ಪಟ್ಟಿಗಳಿದ್ದಲ್ಲಿ ಅದರ ಪ್ರತಿಯನ್ನು ಅಭ್ಯರ್ಥಿಗೆ/ರಾಜಕೀಯ ಪಕ್ಷಗಳಿಗೆ ನೀಡಿ ಮೂಲ ಮತದಾರರ ಪಟ್ಟಿಯಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಮಾಡಿಕೊಳ್ಳುವಂತೆ ತಿಳಿಸಬಹುದು.

**7) ಚುನಾವಣಾ ಪ್ರಚಾರದ ಅವಧಿಯಲ್ಲಿ ನೀತಿ ಸಂಹಿತೆ:**

1. ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೀತಿ ಸಂಹಿತೆಯನ್ನು ಜಾರಿಗೊಳಿಸಿ, ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕು. ಇದರಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಅದನ್ನು ಜಿಲ್ಲಾಚುನಾವಣಾಧಿಕಾರಿ, ಚುನಾವಣಾಧಿಕಾರಿಗಳ ಗಮನಕ್ಕೆ ತರುವುದು. ಲೋಪಗಳನ್ನು ಸರಿಪಡಿಸಿಕೊಳ್ಳದೇ ಇದ್ದಲ್ಲಿ ಅದನ್ನು ಆಯೋಗಕ್ಕೆ ವರದಿ ಮಾಡುವುದು.
2. ಅಭ್ಯರ್ಥಿಗಳ ಸಭೆಯಲ್ಲಿ ಸದಾಚಾರ ಸಂಹಿತೆಯ ಅವಕಾಶಗಳ ಬಗ್ಗೆ ಹಾಗೂ ರಾಜ್ಯ ಚುನಾವಣಾ ಆಯೋಗವು ಈ ವಿಚಾರದಲ್ಲಿ ನೀಡುವ ನಿರ್ದೇಶನಗಳ ಬಗ್ಗೆ ವಿವರಣೆಗಳನ್ನು ನೀಡುವುದು.
3. ರಾಜಕೀಯ ಸಭೆಗಳು ಮತ್ತು ತಾರಾ ಪ್ರಚಾರಕರ ಚುನಾವಣಾ ಪ್ರಚಾರಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸುವುದು.
4. ಸದಾಚಾರ ಸಂಹಿತೆ ಕಟ್ಟುನಿಟ್ಟಿನ ಜಾರಿಯ ಬಗ್ಗೆ ಗಮನಹರಿಸುವುದು.
5. ಡಮ್ಮಿ ಅಭ್ಯರ್ಥಿಗಳು ಮತ್ತು ಅವರು ನಡೆಸುವ ಚುನಾವಣಾ ಪ್ರಚಾರವನ್ನು ಗಮನಿಸುವುದು.

**8) ಅಭ್ಯರ್ಥಿಗಳ ಚುನಾವಣಾ ವೆಚ್ಚಗಳ ಬಗ್ಗೆ ನಿಗಾವಹಿಸುವುದು**

1. ಜಿಲ್ಲಾ ಚುನಾವಣಾಧಿಕಾರಿಗಳಿಂದ ಅಭ್ಯರ್ಥಿಗಳಿಗೆ ಚುನಾವಣಾ ವೆಚ್ಚಮಿತಿ ನಿಗಧಿ ಪಡಿಸಿರುವ ಆದೇಶವನ್ನು ಪಡೆದುಕೊಳ್ಳುವುದು.
2. ಅಭ್ಯರ್ಥಿಗಳ ಚುನಾವಣಾ ವೆಚ್ಚಗಳನ್ನು ಪರಿಶೀಲಿಸಲು ದಿನಾಂಕಗಳನ್ನು ನಿಗಧಿಪಡಿಸಿ ಸದರಿ ದಿನಾಂಕಗಳಂದು ಅವರು ನಿರ್ವಹಿಸಿರುವ ಚುನಾವಣಾ ವೆಚ್ಚಗಳ ವಿವರಗಳನ್ನು ಪರಿಶೀಲಿಸುವುದು.
3. ಚುನಾವಣಾ ವೆಚ್ಚಗಳ ದಾಖಲೆಗಳನ್ನು ಪರಿಶೀಲಿಸುವುದು.
4. ಚುನಾವಣಾ ವೆಚ್ಚಗಳ ಸಂಕ್ಷಿಪ್ತ ತ:ಖ್ತೆ ಗಳನ್ನು ಅದಕ್ಕೆ ಸಂಬಂದಿಸಿದ ವೆಚ್ಚ ವಿವರಗಳ ಬಗ್ಗೆ ನಿಗಾವಹಿಸುವುದು.

**9) ಮತದಾನಕ್ಕೆ ಮುಂಚಿನ ಪೂರ್ವ ಸಿದ್ದತೆ ವ್ಯವಸ್ಥೆಗಳು**

1. ಸ್ಪರ್ದಿಸುವ ಉಮೇದುವಾರರ ಪಟ್ಟಿ ತಯಾರಿಸಿದ ಕೂಡಲೇ ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ರವಾನಿಸಲು ಮಾಡಿರುವ ವ್ಯವಸ್ಥೆಗಳನ್ನು ಪರಿಶೀಲಿಸುವುದು.
2. ಮತದಾನ ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸಲು ವೀಕ್ಷಕರ ಸಮ್ಮುಖದಲ್ಲಿ Randomization ಮಾಡಲಾಗುವುದು.
3. ಮತಗಟ್ಟೆವಾರು ಮತಯಂತ್ರಗಳನ್ನು ವೀಕ್ಷಕರ ಸಮ್ಮುಖದಲ್ಲಿ Randomization ಮಾಡಲಾಗುವುದು.
4. ಮತದಾನ ಸಿಬ್ಬಂದಿಗಳಿಗೆ ಚುನಾವಣೆಯ ಬಗ್ಗೆ ಮತ್ತು ವಿದ್ಯುನ್ಮಾನ ಮತಯಂತ್ರಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ತರಬೇತಿ ನೀಡಲು ಮಾಡಿರುವ ತರಬೇತಿ ಶಿಬಿರದ ಮೇಲುಸ್ತುವಾರಿ ಮಾಡುವುದು.
5. ಮತಗಟ್ಟೆ ಸಿಬ್ಬಂದಿಗಳಿಗೆ ಅಂಚೆ ಮತಪತ್ರ ನೀಡುವ ಬಗ್ಗೆ ಮಾಡಿರುವ ವ್ಯವಸ್ಥೆಯ ಮೇಲ್ವಿಚಾರಣೆ.
6. ಮತದಾನ ಕೇಂದ್ರಗಳ ಪಟ್ಟಿಯಂತೆ ನಿಗದಿಪಡಿಸಿರುವ ಎಲ್ಲಾ ಮತಗಟ್ಟೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಭೌತಿಕವಾಗಿ ಪರಿಶೀಲಿಸಿದ್ದು ಚುನಾವಣೆಗೆ ಯೋಗ್ಯವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕೆಲವು ಮತಗಟ್ಟೆಗಳನ್ನು ಖುದ್ದು ಭೇಟಿ ನೀಡಿ ಪರಿಶೀಲಿಸುವುದು.
7. ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳು ಹಾಗೂ ದುರ್ಬಲ ಮತದಾರರಿರುವ ಪ್ರದೇಶಗಳನ್ನು ಗುರುತಿಸಿರುವುದನ್ನು ಪರಿಶೀಲಿಸುವುದು.
8. ಕಾನೂನು ಮತ್ತು ಸುವ್ಯವಸ್ಥೆ ವಿಚಾರದಲ್ಲಿ ಮತ್ತು ಅಗತ್ಯ ಪೋಲೀಸ್ ಸಿಬ್ಬಂದಿಗಳ ನಿಯೋಜನೆ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಮತ್ತು ಪೋಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸುವುದು.
9. ಮೈಕ್ರೋ ಅಬ್ಸರ್‌ವರ್ಸ್‌ಗಳಿಗೆ ತರಬೇತಿ ಮತ್ತು ಅವರನ್ನು ಮತಗಟ್ಟೆಗಳಿಗೆ ನಿಯೋಜಿಸುವ ಬಗ್ಗೆ
10. ಮತದಾನದ ಹಿಂದಿನ ದಿನದಂದು ಮತಗಟ್ಟೆ ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ತೆರಳಲು ಮಾಡಿರುವ ಮಸ್ಟರಿಂಗ್ ಮತ್ತು ಮತದಾನ ಮುಗಿದ ನಂತರ ಸಂಗ್ರಹಣಾ ಕೇಂದ್ರದ ಡಿಮಸ್ಟರಿಂಗ್ ಕಾರ್ಯಕ್ಕಾಗಿ ಮಾಡಿರುವ ಸಿದ್ದತೆಗಳು ಉತ್ತಮವಾಗಿರುವ ಬಗ್ಗೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
11. ಎಣಿಕೆ ಕೇಂದ್ರ ಮತ್ತು ಎಣಿಕೆಗಾಗಿ ಮಾಡಿರುವ ಸಿದ್ದತೆಗಳ ಬಗ್ಗೆ ಮೇಲ್ವಿಚಾರಣೆ.

**10) ಮತದಾನದ ದಿನದಂದು ಮೇಲ್ವಿಚಾರಣೆ/ ನಿರ್ವಹಣೆ**

1. ಸೆಕ್ಟರ್ ಆಫೀಸರ್‌ಗಳನ್ನು ಮತ್ತು ಮೈಕ್ರೊ ಅಬ್ಸರ್‌ವರ್ಸ್‌ಗಳನ್ನು ಸೂಕ್ತ ಜಾಗಗಳಲ್ಲಿ ನಿಯೋಜಿಸ ಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು.
2. ಮತದಾನ ಪ್ರಾರಂಭವಾಗುವುದಕ್ಕೆ ಮುನ್ನ ಅಣಕು ಮತದಾನ ಮಾಡಿ ಈ ಬಗ್ಗೆ ಮತಗಟ್ಟೆ ಅಧ್ಯಕ್ಷಾಧಿಕಾರಿಯು ಸಹಿ ಮಾಡಿರುವ ಧೃಢೀಕರಣ ಪತ್ರವನ್ನು ಪರಿಶೀಲಿಸಿ, ಅಣಕು ಮತದಾನದ ಸಂದರ್ಭದಲ್ಲಿ ಒಬ್ಬ ಪೋಲಿಂಗ್ ಏಜೆಂಟನೂ ಇಲ್ಲದಿರುವಂತಹ ಅಥವಾ ಒಬ್ಬನೇ ಏಜೆಂಟನು ಇರುವಂತಹ ಪ್ರಕರಣಗಳನ್ನು ಗುರುತಿಸಿ ಪರಿಶೀಲಿಸುವುದು.
3. ಮತದಾನ ನಡೆಯುತ್ತಿರುವ ಸಂದರ್ಭದಲ್ಲಿ ಮತದಾನದ ಅಂಕಿ–ಅಂಶಗಳನ್ನು ಗಮನಿಸಿ, ಮತದಾನವು ಬಿರುಸಿನಿಂದ ಅಥವಾ ಸಾಮಾನ್ಯವಾಗಿ ನಡೆಯುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸುವುದು.
4. ಮತದಾನದ ಅವಧಿಯಲ್ಲಿ ಯಾವುದೇ ವಿಶೇಷ ಪ್ರಕರಣಗಳು/ಘಟನೆಗಳು ಸಂಭವಿಸಿದ ಬಗ್ಗೆ ಗಮನಿಸಿ.
5. ಯಾವುದೇ ಮತಗಟ್ಟೆಯಲ್ಲಿ ಮತದಾನವು ತಡವಾಗಿ ಪ್ರಾರಂಭವಾದ ಬಗ್ಗೆ ಮತ್ತು ಮತದಾನವು ಸ್ಥಗಿತಗೊಂಡಿರುವ ಬಗ್ಗೆ ಪರಿಶೀಲಿಸುವುದು.

6. ಆಯೋಗಕ್ಕೆ ವರದಿ ಮಾಡುವಂತಹ ಯಾವುದೇ ಪ್ರಕರಣಗಳಿದ್ದಲ್ಲಿ ಅದನ್ನು ವರದಿ ಮಾಡುವುದು.

7. ಮತದಾನ ಮುಕ್ತಾಯದ ನಂತರ ಪೋಲಿಂಗ್ ಅಧಿಕಾರಿಗಳಿಂದ ಸಂಗ್ರಹಿಸಿಕೊಳ್ಳಬೇಕಾದ ಸಾಮಗ್ರಿಗಳನ್ನು ಸ್ವೀಕರಿಸಲು ಎಲ್ಲಾ ಪೂರ್ವ ಸಿದ್ದತೆಗಳೊಂದಿಗೆ ತಯಾರಿರುವ ತಂಡಗಳನ್ನು ರಚಿಸಿ ಮಾಡಿರುವ ವ್ಯವಸ್ಥೆಗಳನ್ನು ಪರಿಶೀಲಿಸುವುದು. ಶಾಸನಬದ್ಧವಲ್ಲದ ಲಕೋಟೆಗಳನ್ನು ಮತಯಂತ್ರಗಳೊಂದಿಗೆ ಭದ್ರತಾ ಕೊಠಡಿಯಲ್ಲಿ ಇಡಲಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

8. ಯಾವುದೇ ಮತಗಟ್ಟೆಯಲ್ಲಿ ಅಹಿತಕರ ಘಟನೆ ನಡೆದಿದ್ದಲ್ಲಿ ಅಂತಹ ಮತಗಟ್ಟೆಯ ಸಾಮಗ್ರಿಗಳನ್ನು ಸ್ವೀಕರಿಸಲು ಪ್ರತ್ಯೇಕವಾಗಿ ವಿಶೇಷ ಕೌಂಟರ್ ಅನ್ನು ಸ್ಥಾಪಿಸಿ, ಅಂತಹ ಮತಗಟ್ಟೆಯ ಅಧಿಕಾರಿಗಳಿಂದ ಪಡೆದುಕೊಳ್ಳ ಬೇಕಾದ ಅವಶ್ಯಕ ಮಾಹಿತಿಯನ್ನು ಪಡೆದುಕೊಳ್ಳುವ ಬಗ್ಗೆ ಮಾಡಿರುವ ವ್ಯವಸ್ಥೆಯನ್ನು ಪರಿಶೀಲಿಸುವುದು.

**11) ಮತದಾನದ ನಂತರದ ಕಾರ್ಯಗಳ ಮೇಲ್ವಿಚಾರಣೆ**

ಮತದಾನವು ಸರಿಯಾದ ರೀತಿಯಲ್ಲಿ ನಡೆದಿದೆ ಅಥವಾ ಮರು ಮತದಾನದ ಅವಶ್ಯಕತೆ ಇದೆ ಎಂಬ ಬಗ್ಗೆ ನಿರ್ಧರಿಸಲು ಮತದಾರರ ರಿಜಿಸ್ಟರ್ ಅನ್ನು ಒಂದು ಅಳತೆಗೋಲಾಗಿ ಪರಿಗಣಿಸಬೇಕಿದ್ದಲ್ಲಿ, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಮತದಾನದ ಬಗ್ಗೆ ಹಾಗೂ ಮರುಮತದಾನ ನಡೆಸುವ ಅಗತ್ಯತೆ ಬಗ್ಗೆ ಆಯೋಗಕ್ಕೆ ವರದಿ ಮಾಡುವುದು.

**12) ಎಣಿಕೆ**

1. ಮತಗಳ ಎಣಿಕೆ ಕಾರ್ಯದ ಬಗ್ಗೆ ಮಾಡಿರುವ ವ್ಯವಸ್ಥೆಯನ್ನು ಪರಾಮರ್ಶಿಸುವುದು.

2. ವೀಕ್ಷಕರ ಸಮ್ಮುಖ ದಲ್ಲಿ Randomization ಮಾಡಿ ಮತ ಎಣಿಕೆ ಸಿಬ್ಬಂದಿಗಳನ್ನು ಎಣಿಕೆ ಟೇಬಲ್ ಗಳಿಗೆ ನಿಯೋಜಿಸುವುದು.

3. ಮತಯಂತ್ರಗಳಲ್ಲಿ ಮತಗಳನ್ನು ಎಣಿಕ ಮಾಡುವ ಮೊದಲು ಅಂಚೆ ಮತಪತ್ರಗಳ ಎಣಿಕೆಯನ್ನು ಮುಕ್ತಾಯಗೊಳಿಸಿ, ನಂತರ ಮತಯಂತ್ರಗಳಲ್ಲಿನ ಮತಗಳ ಎಣಿಕೆಯನ್ನು ಪ್ರಾರಂಭಿಸುವುದು.

4. ಪ್ರತಿ ಸುತ್ತಿನ ಮತ ಎಣಿಕೆಯಲ್ಲಿ ವೀಕ್ಷಕರು ಯಾವುದಾದರೂ ಎರಡು ಮತಯಂತ್ರಗಳನ್ನು ಪರಿಶೀಲಿಸಿ ಎಣಿಕೆ ಸಿಬ್ಬಂದಿಗಳು ಮಾಡಿರುವ ಎಣಿಕೆ ಫಲಿತಾಂಶದ ಪಟ್ಟಿಯೊಂದಿಗೆ ತಾಳೆ ನೋಡಿ ಸರಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

5. ಪ್ರತಿ ಸುತ್ತಿನ ಮತ ಎಣಿಕೆಯ ನಂತರ ಆ ಸುತ್ತಿನ ಫಲಿತಾಂಶವನ್ನು ಪ್ರಕಟಿಸಲು ಮಾಡಿರುವ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವುದು.

6. ಪ್ರತಿ ವಾರ್ಡಿನ ಎಣಿಕೆ ಕಾರ್ಯ ಮುಕ್ತಾಯದ ನಂತರ ಎಣಿಕೆಯು ಸರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು, ಚುನಾವಣಾಧಿಕಾರಿಗಳು ಫಲಿತಾಂಶವನ್ನು ಘೋಷಿಸಲು ಅನುಮತಿಸುವುದು.

7. ಮರು ಎಣಿಕೆ ಆದ ಸಂದರ್ಭದಲ್ಲಿ ಮರು ಎಣಿಕೆಯ ಬಗ್ಗೆ ಆಯೋಗಕ್ಕೆ ವರದಿ ಮಾಡುವುದು.

**13) ಅಭ್ಯರ್ಥಿಗಳ ಚುನಾವಣಾ ವೀಕ್ಷಕರಿಗೆ ಚುನಾವಣಾ ಕೆಲಸ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲು ಸಭೆ:**

ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೀಕ್ಷಕರನ್ನಾಗಿ ನೇಮಿಸಲಾಗುವ ಅಧಿಕಾರಿಗಳಿಗೆ ಆಯೋಗದಿಂದ ಅಥವಾ ಆಯೋಗವು ನೇಮಿಸುವ ನೋಡಲ್ ಅಧಿಕಾರಿಗಳಿಂದ ಮಾಹಿತಿ ನೀಡಿ ಅವರಿಗೆ ಚುನಾವಣಾ ವಿಷಯಗಳಲ್ಲಿ ಅವರು ನಿರ್ವಹಿಸಬೇಕಾಗಿರುವ ಕೆಲಸ-ಕಾರ್ಯಗಳ ಬಗ್ಗೆ ಸಭೆಯನ್ನು ಆಯೋಜಿಸಿ ಸಂಕ್ಷಿಪ್ತವಾಗಿ ಮಾಹಿತಿ ನೀಡಲಾಗುವುದು. ವೀಕ್ಷಕರಾಗಿ ನೇಮಿಸಲಾಗುವ ಅಧಿಕಾರಿಗಳು ಸದರಿ ಸಭೆಗೆ ತಪ್ಪದೆ ಹಾಜರಾಗುವುದು. ವೀಕ್ಷಕರನ್ನಾಗಿ ನೇಮಿಸಲಾದ ಅಧಿಕಾರಿಗಳನ್ನು ಸಕಾರಣಗಳಿಲ್ಲದೆ ಬದಲಾವಣೆ ಮಾಡಲಾಗುವುದಿಲ್ಲ.

**14) ಚುನಾವಣಾ ವೀಕ್ಷಕರ ಪ್ರವಾಸ ಮತ್ತು ಕೇಂದ್ರಸ್ಥಾನದಲ್ಲಿ ಹಾಜರಿಲ್ಲದಿರುವ ಬಗ್ಗೆ.**

1. ಚುನಾವಣಾ ವೀಕ್ಷಕರು, ವೀಕ್ಷಕರಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ತಮ್ಮ ಸ್ವಂತ ಕಾರ್ಯಕ್ಕಾಗಿ ಅಥವಾ ಕಛೇರಿಯ ಕಾರ್ಯಕ್ಕಾಗಿ ಹೋಗಬೇಕಾದಲ್ಲಿ ಆಯೋಗದಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕಾಗಿರುತ್ತದೆ.
2. ಮೀಸಲು ಚುನಾವಣಾ ವೀಕ್ಷಕರ ಪಟ್ಟಿಯಲ್ಲಿರುವ ಅಧಿಕಾರಿಗಳು ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಆಯೋಗದ ಪೂರ್ವಾನುಮತಿ ಪಡೆಯದೆ ದೀರ್ಘಾವಧಿ ರಜೆಯನ್ನು ತೆಗೆದುಕೊಳ್ಳುವಂತಿಲ್ಲ.

**15) ಚುನಾವಣಾ ವೀಕ್ಷಕರು ಆಯೋಗಕ್ಕೆ ಸಲ್ಲಿಸಬೇಕಾದ ವರದಿಗಳು**

ಎ. ಚುನಾವಣಾ ವೀಕ್ಷಕರು ಅನುಬಂಧದಲ್ಲಿ ನೀಡಿರುವ ನಮೂನೆಗಳಲ್ಲಿ ವರದಿ ನೀಡುವುದಲ್ಲದೆ ಚುನಾವಣೆಯ ಯಾವುದೇ ಹಂತದಲ್ಲಿ ಅಕ್ರಮಗಳು/ತಪ್ಪುಗಳಾಗಿದ್ದಲ್ಲಿ ಅದನ್ನು ಆಯೋಗಕ್ಕೆ ವರದಿ ಮಾಡುವುದು.

1. ವೀಕ್ಷಕರು ಆಗಮಿಸಿದ 5 ದಿನಗಳ ನಂತರ(7 ದಿನಗಳ ಒಳಗಾಗಿ) ಮೊದಲ ವರದಿಯನ್ನು ಕಳುಹಿಸತಕ್ಕದ್ದು. (ಅನುಬಂಧ–2)
2. ಮತದಾನಕ್ಕೆ ಮೂರು ದಿನ ಮುಂಚೆ ಎರಡನೇ ವರದಿಯನ್ನು ಸಲ್ಲಿಸತಕ್ಕದ್ದು. (ಅನುಬಂಧ–3)
3. ಮತದಾನದ ನಂತರ
4. ಮತದಾರರ ರಿಜಿಸ್ಟರನ್ನು ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಿ ಮೂರನೆ ವರದಿಯನ್ನು ಸಲ್ಲಿಸತಕ್ಕದ್ದು. (ಅನುಬಂಧ–4)
5. ಎಣಿಕೆ ನಂತರ ನಾಲ್ಕನೇ ವರದಿಯನ್ನು ಸಲ್ಲಿಸತಕ್ಕದ್ದು. (ಅನುಬಂಧ–5)

5. ಈ ಮೇಲ್ಕಂಡ ವರದಿಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಇ–ಮೇಲ್ ಮುಖಾಂತರ, ಫ್ಯಾಕ್ಸ್ ಮುಖಾಂತರ ಅಥವಾ ಮುದ್ದಾಂ ಸಲ್ಲಿಸುವುದು.
6. ಎಲ್ಲಾ ಅಥವಾ ಅತೀ ಮುಖ್ಯವಾದ ವರದಿಗಳನ್ನು ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ರವರಿಗೆ ಕಳುಹಿಸತಕ್ಕದ್ದು. ವರದಿಗಳಲ್ಲಿನ ಮಾಹಿತಿಯನ್ನು ರಾಜ್ಯ ಚುನಾವಣಾ ಆಯೋಗಕ್ಕಲ್ಲದೆ ಇತರೆ ಯಾರಿಗೂ ದೊರೆಯದಂತೆ ವೀಕ್ಷಕರು ಎಚ್ಚರವಹಿಸುವುದು.
7. ತುರ್ತು ಸಂದರ್ಭದಲ್ಲಿ ದೂರವಾಣಿ ಮುಖಾಂತರ ಮಾಡಲಾದ ವರದಿಗೆ ಕೂಡಲೆ ಪತ್ರದ ಮುಖೇನ ವರದಿ ಮಾಡುವುದು.

**16) ವೀಕ್ಷಕರಿಗೆ ಅಂಚೆ ಮತಪತ್ರ**

ಚುನಾವಣಾ ಕರ್ತವ್ಯದಲ್ಲಿ ನಿರತರಾಗಿರುವ ಸರ್ಕಾರಿ ನೌಕರರಿಗಿರುವಂತೆ ಚುನಾವಣಾ ವೀಕ್ಷಕರೂ ಸಹ ಅವರು ಮತದಾರರಾಗಿರುವ ವಾರ್ಡಿನಲ್ಲಿ ಚುನಾವಾಣಾ ಸಂದರ್ಭದಲ್ಲಿ ಇತರೆ ಸ್ಥಳದಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುತ್ತಿದ್ದರೆ ಅವರು ತಮ್ಮ ವಾರ್ಡಿನ ಚುನಾವಣಾಧಿಕಾರಿಗಳಿಗೆ ಅಂಚೆ ಮತಪತ್ರಕ್ಕಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ಅಂಚೆ ಮತಪತ್ರವನ್ನು ಪಡೆದುಕೊಳ್ಳ ಬಹುದಾಗಿರುತ್ತದೆ.

**17) ವಾರ್ಡುಗಳಿಗೆ ಚುನಾವಣಾ ವೀಕ್ಷಕರ ಆಗಮನ:–**

ಚುನಾವಣಾ ವೀಕ್ಷಕರು ನಾಮಪತ್ರ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕದಂದು ಬೆಳಿಗ್ಗೆ ತಮ್ಮನ್ನು ನೇಮಿಸಿರುವ ಕ್ಷೇತ್ರದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಹಾಗೂ ತಮಗೆ ಹಂಚಿಕೆ ಮಾಡಲಾದ ವಾರ್ಡುಗಳಿಗೆ ತೆರಳಿ ಕರ್ತವ್ಯ ನಿರ್ವಹಿಸುವುದು. ಚುನಾವಣಾ ವೀಕ್ಷಕರನ್ನು ಬರಮಾಡಿಕೊಂಡು ಅವರಿಗೆ

ವಹಿಸಲಾದ ವಾರ್ಡುಗಳ ಬಗ್ಗೆ ಪರಿಚಯಿಸಲು ಒಬ್ಬ ಸ್ಥಳೀಯ ಬಿಬಿಎಂಪಿ ಅಧಿಕಾರಿಯನ್ನು ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳು ನೇಮಿಸತಕ್ಕದ್ದು ಹಾಗೂ ಚುನಾವಣಾ ವೀಕ್ಷಕರಿಗೆ ವಾಸ್ತವ್ಯದ ಅಗತ್ಯವಿದ್ದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆಯನ್ನು, ವಾಹನದ ವ್ಯವಸ್ಥೆಯನ್ನು ಮತ್ತು ಸಂಪರ್ಕ ಸಾಧನಗಳಾದ ಇಂಟರ್‌ನೆಟ್, ಫ್ಯಾಕ್ಸ್ ಇತರೆ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಚುನಾವಣಾಧಿಕಾರಿಗಳು ಚೆಕ್‌ಲಿಸ್ಟ್‌ನಲ್ಲಿ (ಅನುಬಂಧ–1ರಂತೆ) ಮಾಹಿತಿಯನ್ನು ತಯಾರಿಸಿ ಚುನಾವಣಾ ವೀಕ್ಷಕರುಗಳಿಗೆ ಹಂಚಿಕೆ ಮಾಡಲಾದ ವಾರ್ಡುಗಳ ನಕ್ಷೆಗಳೊಂದಿಗೆ ಒದಗಿಸತಕ್ಕದ್ದು.

**18) ಚುನಾವಣಾ ವೀಕ್ಷಕರೊಂದಿಗೆ ಡಿ.ಇ.ಓ.ಗಳ ಮತ್ತು ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳ ಮುಖಾಮುಖಿ ಸಂವಾದ**

ಜಿಲ್ಲಾ ಚುನಾವಣಾಧಿಕಾರಿಗಳು ಆದಷ್ಟು ಬೇಗನೆ ಸಂಬಂಧಿಸಿದ ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ, ನೋಡಲ್ ಅಧಿಕಾರಿ, ಪೋಲೀಸ್ ಇಲಾಖೆ, ಮತ್ತು ಅಭ್ಯರ್ಥಿಗಳ ಚುನಾವಣಾ ವೆಚ್ಚಗಳನ್ನು ಪರಿಶೀಲಿಸಲು ನೇಮಕ ಮಾಡಲಾದ ನಿಗದಿತ ಅಧಿಕಾರಿಗಳೊಂದಿಗೆ ವೀಕ್ಷಕರ ಸಭೆಯನ್ನು ನಡೆಸಲು ಕ್ರಮ ಕೈಗೊಳ್ಳತಕ್ಕದ್ದು ಹಾಗೂ ವೀಕ್ಷಕರು ವಿಶೇಷ ಗಮನ ಹರಿಸಬೇಕಾದಂತಹ ನಿರ್ದಿಷ್ಟ ವಿಷಯಗಳಲ್ಲಿ ಅವರಿಗೆ ತಿಳಿಸತಕ್ಕದ್ದು. ಚುನಾವಣಾ ವೀಕ್ಷಕರು ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿ ಕಛೇರಿಯಲ್ಲಿ ಹಾಜರಿದ್ದು ಪ್ರಕ್ರಿಯೆಯನ್ನು ಗಮನಿಸುವುದು.

**19) ಚುನಾವಣಾ ವೀಕ್ಷಕರು ಪರಿವೀಕ್ಷಿಸತಕ್ಕ ಅಂಶಗಳು**

1) ಅಗತ್ಯವಿರುವಷ್ಟು ಚುನಾವಣಾಧಿಕಾರಿ / ಸಹಾಯಕ ಚುನಾವಣಾಧಿಕಾರಿ ಹಾಗೂ ಸಹಾಯಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುವ ಬಗ್ಗೆ (ಎಣಿಕೆ ಕಾರ್ಯವನ್ನು ಸೇರಿದಂತೆ)
2) ಮಸ್ಟರಿಂಗ್, ಡಿಮಸ್ಟರಿಂಗ್ ಮತ್ತು ಮತ ಎಣಿಕೆ ಕಾರ್ಯಕ್ಕಾಗಿ ಸ್ಥಳ ಮತ್ತು ಕಟ್ಟಡಗಳನ್ನು ಗುರುತಿಸಿರುವ ಬಗ್ಗೆ
3) ಮತಗಟ್ಟೆಗಳ ಪಟ್ಟಿಗಳನ್ನು ಅಂತಿಮಗೊಳಿಸಿರುವ ಬಗ್ಗೆ.
4) ಮಾದರಿ ನೀತಿಸಂಹಿತೆಯನ್ನು ಅನುಷ್ಠಾನಗೊಳಿಸಲು ಹಾಗೂ ಉಸ್ತುವಾರಿಗಾಗಿ ಮಾಡಿರುವ ಕಾರ್ಯವ್ಯವಸ್ಥೆ ಬಗ್ಗೆ.
5) ಮತಗಟ್ಟೆ ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಿರುವ ಬಗ್ಗೆ.
6) ಸಾರ್ವಜನಿಕರಿಂದ ಮತ್ತು ರಾಜಕೀಯ ಪಕ್ಷಗಳಿಂದ ಮಾಹಿತಿ ಸಂಗ್ರಹಿಸಲು ಕಂಟ್ರೋಲ್ ರೂಂಗಳ ವ್ಯವಸ್ಥೆ ಮತ್ತು ಪೋಲೀಸ್ ಇಲಾಖೆ, ಜಿಲ್ಲಾ ಚುನಾವಣಾಧಿಕಾರಿ ಮತ್ತು ಚುನಾವಣಾಧಿಕಾರಿಗಳೊಂದಿಗೆ ಆಂತರಿಕ ಸಮನ್ವಯಕ್ಕಾಗಿ ಕಂಟ್ರೋಲ್ ರೂಂಗಳ ವ್ಯವಸ್ಥೆ ಮಾಡಿರುವ ಬಗ್ಗೆ.

ಚುನಾವಣಾ ವೀಕ್ಷಕರು ಚೆಕ್‌ಲಿಸ್ಟ್ (ಅನುಬಂಧ–1) ಅನ್ನು ಪೂರ್ಣವಾಗಿ ಪರಿಶೀಲಿಸಿದ ನಂತರ ಚುನಾವಣಾ ಸಿದ್ಧತೆ ಬಗ್ಗೆ ಏನಾದರೂ ತೊಡಕು ಇರುವುದನ್ನು ಗಮನಿಸಿದಲ್ಲಿ ಈ ವಿಷಯವನ್ನು ಆಯೋಗದ ಗಮನಕ್ಕೆ ತರತಕ್ಕದ್ದು.

**20) ನಾಮಪತ್ರಗಳ ಪರಿಶೀಲನೆ:–**

ಚುನಾವಣಾ ವೀಕ್ಷಕರು ಸಂಬಂಧಿಸಿದ ವಾರ್ಡುಗಳಿಗೆ ನಾಮಪತ್ರ ಸ್ವೀಕಾರ ಪ್ರಕ್ರಿಯೆ ಮುಗಿದ ನಂತರ ಆಗಮಿಸಿದಲ್ಲಿ ನಾಮಪತ್ರ ಸ್ವೀಕಾರ ಪ್ರಕ್ರಿಯೆಯನ್ನು ವೀಕ್ಷಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಚುನಾವಣಾ ವೀಕ್ಷಕರು ನಾಮಪತ್ರ ಸ್ವೀಕಾರ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣವನ್ನು ವೀಕ್ಷಿಸಿ ಈ ಪ್ರಕ್ರಿಯೆಯಲ್ಲಿ ಆಯೋಗವು ನೀಡಿರುವ ನಿರ್ದೇಶನಗಳನ್ನು ಪಾಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕಾಗಿರುತ್ತದೆ. ನಾಮಪತ್ರ ಸಲ್ಲಿಸುವ

ಸಮಯದಲ್ಲಿ ಆಯೋಗವು ನಿಗದಿಪಡಿಸಿರುವಷ್ಟು ಜನರಿಗೆ ಮಾತ್ರ ಚುನಾವಣಾಧಿಕಾರಿ ಕಛೇರಿಯಲ್ಲಿ ಪ್ರವೇಶಿಸಲು ಅನುಮತಿ ನೀಡಿರುವ ಬಗ್ಗೆಯೂ ಪರಿಶೀಲಿಸತಕ್ಕದ್ದು.

ಚುನಾವಣಾ ವೀಕ್ಷಕರು ನಾಮಪತ್ರ ಪರಿಶೀಲನೆ ಮತ್ತು ನಾಮಪತ್ರ ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಮುಗಿದ ನಂತರ ಅಂತಿಮವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆಯನ್ನು ವೀಕ್ಷಿಸತಕ್ಕದ್ದು. ಒಂದು ವೇಳೆ ಈ ಪ್ರಕ್ರಿಯೆಯಲ್ಲಿ ಏನಾದರೂ ಗೊಂದಲ ಉಂಟಾದಲ್ಲಿ ಈ ಬಗ್ಗೆ ಚುನಾವಣಾ ವೀಕ್ಷಕರು ಕೂಡಲೇ ಆಯೋಗದ ಗಮನಕ್ಕೆ ತರತಕ್ಕದ್ದು. ಪರಂತು ಯಾವುದೇ ನಿರ್ದೇಶನಗಳನ್ನು ಚುನಾವಣಾಧಿಕಾರಿಗಳಿಗೆ ನೀಡತಕ್ಕದ್ದಲ್ಲ.

ಚುನಾವಣಾಧಿಕಾರಿಗಳ ಬಳಿ ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ನಾಮಪತ್ರಗಳ ಪರಿಶೀಲನೆ ಸಂಬಂಧ ಆಯೋಗವು ನೀಡಿರುವ ನಿರ್ದೇಶನಗಳ ಮತ್ತು ಆದೇಶಗಳ ಪ್ರತಿಗಳು ಲಭ್ಯವಿರುವ ಬಗ್ಗೆ ಚುನಾವಣಾ ವೀಕ್ಷಕರು ವೀಕ್ಷಿಸತಕ್ಕದ್ದು.

ಈ ಕೆಳಕಂಡವುಗಳು ಪ್ರಮುಖ ಅಂಶಗಳಾಗಿವೆ.

1) ಆಯೋಗವು ಹೊರಡಿಸಿರುವ ರಾಜಕೀಯ ಪಕ್ಷಗಳ ಮತ್ತು ಚುನಾವಣಾ ಚಿಹ್ನೆಗಳ ಪಟ್ಟಿ.

2) ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರದೊಂದಿಗೆ ಸಲ್ಲಿಸಬೇಕಾದ ಅಫಿಡವಿಟ್‌ನ ನಮೂನೆಗಳ ಬಗ್ಗೆ ಆಯೋಗದ ಮಾರ್ಗದರ್ಶನಗಳು.

3) ಫಾರಂ ಎ ಮತ್ತು ಬಿ ಗಳಲ್ಲಿ ರಾಜಕೀಯ ಪಕ್ಷಗಳು ಆ ಪಕ್ಷದ ಅಧಿಕೃತ ಅಭ್ಯರ್ಥಿಗಳ ಹೆಸರನ್ನು ನಮೂದಿಸಲು ಮತ್ತು ಆ ಅಭ್ಯರ್ಥಿಗೆ ಆ ಪಕ್ಷದ ಮೀಸಲು ಚಿಹ್ನೆಯನ್ನು ಹಂಚುವ ಬಗ್ಗೆ ಆಯೋಗವು ನೀಡಿರುವ ಸೂಚನೆಗಳು.

4) ಆ ವಾರ್ಡಿನ ದೃಢೀಕೃತ ಮತದಾರರ ಪಟ್ಟಿಗಳು.

ಚುನಾವಣಾ ವೀಕ್ಷಕರು ಚುನಾವಣಾಧಿಕಾರಿಗಳೊಂದಿಗೆ ಚರ್ಚಿಸುವ/ಸಮಾಲೋಚಿಸುವ ಮುನ್ನ ಪ್ರಮುಖವಾಗಿ ಚುನಾವಣಾ ಆಯೋಗವು ನೀಡಿರುವ ಸೂಚನೆಗಳನ್ನು ಮನನ ಮಾಡಿಕೊಳ್ಳಬೇಕು ಹಾಗೂ ಅವುಗಳನ್ನು ಸಂಬಂಧಿಸಿದ ಚುನಾವಣಾಧಿಕಾರಿಗಳು ಕಾರ್ಯರೂಪಕ್ಕೆ ತಂದಿರುವ ಬಗ್ಗೆ ದೃಢಪಡಿಸಿಕೊಳ್ಳತಕ್ಕದ್ದು.

**21) ಚಿಹ್ನೆಗಳ ಹಂಚಿಕೆ:–**

ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆಯು ಮುಗಿದ ಕೂಡಲೇ ಚಿಹ್ನೆಗಳ ಹಂಚಿಕೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿಯು ನಡೆಸತಕ್ಕದ್ದು. ಈ ಪ್ರಮುಖ ಪ್ರಕ್ರಿಯೆಯನ್ನು ವೀಕ್ಷಿಸಲು ಚುನಾವಣಾ ವೀಕ್ಷಕರು ಹಾಜರಿರತಕ್ಕದ್ದು. ಚುನಾವಣಾಧಿಕಾರಿಯು ಇತ್ತೀಚಿನ ರಾಜಕೀಯ ಪಕ್ಷಗಳ ಮತ್ತು ಚುನಾವಣಾ ಚಿಹ್ನೆಗಳ ಪಟ್ಟಿಯನ್ನು ಅನುಸರಿಸಿರುವ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಯಾವುದೇ ನೋಂದಾಯಿತವಲ್ಲದ ರಾಜಕೀಯ ಪಕ್ಷಗಳಿಗೆ ಚಿಹ್ನೆ ಹಂಚಿಕೆ ಮಾಡುವಾಗ ಬೇರೆ ರಾಜ್ಯದಲ್ಲಿ ನೋಂದಾಯಿತ ಪಕ್ಷವು ಗುರುತಿಸಿಕೊಂಡಿರುವ ಚಿಹ್ನೆಯನ್ನು ರಾಜಕೀಯ ಪಕ್ಷಗಳಿಗೆ ಹಂಚುವ ಬಗ್ಗೆ ಇರುವ ನಿರ್ಬಂಧಗಳನ್ನು ಗಮನದಲ್ಲಿರಿಸಿಕೊಂಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

ಚಿಹ್ನೆಗಳ ಹಂಚಿಕೆ ಪ್ರಕ್ರಿಯೆಯು ಮುಗಿದ ಕೂಡಲೇ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಪತ್ರ–7 ರಲ್ಲಿ ಪ್ರಕಟಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಕ್ರಮವಾಗಿ ಆಯೋಗವು ನಿರ್ದೇಶಿಸಿದ ಮಾದರಿಯಲ್ಲಿಯೇ ನಮೂದಿಸತಕ್ಕದ್ದು ಮತ್ತು ಈ ಪಟ್ಟಿಯು ಅತ್ಯಂತ ಪ್ರಮುಖವಾದುದಾಗಿದ್ದು ಇವುಗಳ ಮೂಲ ಪ್ರತಿಗಳನ್ನು ಆಯೋಗಕ್ಕೆ ಆದಷ್ಟು ಬೇಗನೆ ಕಳುಹಿಸತಕ್ಕದ್ದು.

**22) ಮತದಾರರ ಪಟ್ಟಿ**

ಕೆಲವೊಂದು ಸಂದರ್ಭಗಳಲ್ಲಿ ಅಭ್ಯರ್ಥಿಗಳಿಗೆ ಮತ್ತು ರಾಜಕೀಯ ಪಕ್ಷಗಳಿಗೆ ನೀಡಿದ ಮತದಾರರಪಟ್ಟಿಗೂ ಮತಗಟ್ಟೆಯಲ್ಲಿ ಮತದಾನಕ್ಕೆ ಒದಗಿಸುವ ಮತದಾರರ ಪಟ್ಟಿಗಳಿಗೂ ವ್ಯತ್ಯಾಸಗಳಿರುವ ಸನ್ನಿವೇಶ ಉಂಟಾಗದಂತೆ ನಿಗಾವಹಿಸುವುದು. ಚುನಾವಣೆ ನಿಯಮಗಳ ಪ್ರಕಾರ ಚುನಾವಣಾಧಿಕಾರಿಯವರು ಮತಗಟ್ಟೆಗಳಿಗೆ ಒದಗಿಸಿದ ಮತದಾರರ ಪಟ್ಟಿಯ ಯಥಾಪ್ರತಿಗಳನ್ನು ಅಭ್ಯರ್ಥಿಗಳು/ರಾಜಕೀಯ ಪಕ್ಷಗಳಿಗೆ ನೀಡಲಾಗಿದೆ ಎಂಬುದನ್ನು ದೃಢೀಕರಿಸಿಕೊಳ್ಳಬೇಕು.

ಚುನಾವಣೆಯ ದಿನದಂದು ಮತಗಟ್ಟೆಯಲ್ಲಿ ಉಪಯೋಗಿಸುವ ಮತದಾರರ ಪಟ್ಟಿಯನ್ನು ಅಭ್ಯರ್ಥಿಗಳು/ ರಾಜಕೀಯ ಪಕ್ಷಗಳಿಗೆ ನೀಡಿದ ಪಟ್ಟಿಯ ಒಂದು ಯಥಾ ಪ್ರತಿಯನ್ನು ವೀಕ್ಷಕರು ಚುನಾವಣಾಧಿಕಾರಿಗಳಿಂದ ಪಡೆದುಕೊಂಡು ತಾವು ಮತಗಟ್ಟೆಗಳಿಗೆ ಭೇಟಿ ನೀಡಿದಾಗ ಮತದಾರರ ಪಟ್ಟಿಗಳನ್ನು ತಾಳೆ ನೋಡುವುದು. ಇದನ್ನು DEO/RO ಗಳೊಂದಿಗೆ ಚರ್ಚಿಸಿ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಎಚ್ಚರಿಕೆ ವಹಿಸಲು ಸೂಚಿಸಿ ಅಭ್ಯರ್ಥಿಗಳಿಗೆ ಹಾಗೂ ರಾಜಕೀಯ ಪಕ್ಷಗಳಿಗೆ ತಿಳಿಸುವುದು.

**23) ಅಭ್ಯರ್ಥಿಗಳೊಂದಿಗೆ ಸಭೆ ನಡೆಸುವುದು.**

ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕದಂದು ಚುನಾವಣಾ ವೀಕ್ಷಕರ ಸಮ್ಮುಖದಲ್ಲಿ ಚುನಾವಣಾಧಿಕಾರಿಯು ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳ ಸಭೆ ಏರ್ಪಡಿಸಿ ಈ ಕೆಳಕಾಣಿಸಿರುವ ಅಂಶಗಳ ಬಗ್ಗೆ ತಿಳುವಳಿಕೆ ನೀಡುವುದು.

i. ಮಾದರಿ ನೀತಿ ಸಂಹಿತೆ ಪಾಲನೆ ಬಗ್ಗೆ ಪ್ರಮುಖ ವಿಷಯಗಳು

ii. ಚುನಾವಣೆ ವೆಚ್ಚಗಳನ್ನು ಸಲ್ಲಿಸಬೇಕಾದ ಅವಧಿ, ಸ್ಥಳ, ಸಮಯ ಹಾಗೂ ನಮೂನೆಗಳ ಬಗ್ಗೆ

iii. ಸಾರ್ವಜನಿಕ ಸಭೆ/ ಸಮಾರಂಭ, ಮೆರವಣಿಗೆಗಳಿಗೆ ಹಾಗೂ ವಾಹನಗಳಿಗೆ ಅನುಮತಿ ಪಡೆಯುವ ಬಗ್ಗೆ.

iv. ಚುನಾವಣೆ ನೀತಿ ಸಂಹಿತೆ ಕಾಯ್ದೆ, ಕಾನೂನುಗಳನ್ನು ಉಲ್ಲಂಘಿಸಿದಲ್ಲಿ ತೆಗೆದುಕೊಳ್ಳಲಿರುವ ಕ್ರಮಗಳ ಬಗ್ಗೆ.

v. ಅಭ್ಯರ್ಥಿಗಳು/ರಾಜಕೀಯ ಪಕ್ಷಗಳೊಂದಿಗೆ ಚುನಾವಣಾ ವೀಕ್ಷಕರ ಪರಸ್ಪರ ಸಂವಾದಕ್ಕೆ ನಿಗದಿಪಡಿಸಿರುವ/ ನಿರ್ದಿಷ್ಟಪಡಿಸುವ ವೇಳೆ, ಸ್ಥಳ ಹಾಗೂ ಸಂಪರ್ಕಿಸುವ ದೂರವಾಣಿ ಸಂಖ್ಯೆ. ಇತ್ಯಾದಿ ಬಗ್ಗೆ.

vi. ಮತದಾರರ ಪಟ್ಟಿಗಳು

vii. ವೀಕ್ಷಕರು Worry list ಬಗ್ಗೆ ವಿವರಿಸಬೇಕು. ಅಭ್ಯರ್ಥಿಗಳು ಯಾವುದಾದರೂ ಮತಗಟ್ಟೆಗಳಲ್ಲಿ ನಿಯಮ ಉಲ್ಲಂಘನೆ, ಚುನಾವಣೆ ಅಕ್ರಮ, ಗಲಭೆ ನಡೆವ ಬಗ್ಗೆ ಗುಮಾನಿ ಇದ್ದಲ್ಲಿ ಅದನ್ನು ವೀಕ್ಷಕರ ಗಮನಕ್ಕೆ ತರಬಹುದು.

**24) ಚುನಾವಣಾ ಕ್ಷೇತ್ರಗಳಿಗೆ ಹಾಗೂ ಮತಗಟ್ಟೆಗಳಿಗೆ ಭೇಟಿ:**

ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿ ಸಿದ್ಧಗೊಳಿಸಿದ ನಂತರ ಚುನಾವಣಾ ವೀಕ್ಷಕರು ಸಾಧ್ಯವಿರುವಷ್ಟು ಹೆಚ್ಚಿನ ಮತಗಟ್ಟೆಗಳಿಗೆ ಭೇಟಿ ನೀಡಿ ಅಲ್ಲಿನ ಸಾಮಾಜಿಕ, ರಾಜಕೀಯ, ಹಣದ ವಹಿವಾಟು ನಡೆಯುತ್ತಿರುವ ಇತ್ಯಾದಿ ಚುನಾವಣಾ ವಿದ್ಯಮಾನಗಳ ಬಗ್ಗೆ ನಿಗಾವಹಿಸುವುದು. ಹೊಸದಾಗಿ ಸ್ಥಾಪಿತವಾಗಿರುವ ಎಲ್ಲಾ ಮತಗಟ್ಟೆಗಳಿಗೆ ಹಾಗೂ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ತಪ್ಪದೇ ಭೇಟಿ ನೀಡಿ ಪರಿಶೀಲಿಸುವುದು.

**25) ಕಾನೂನು ಸುವ್ಯವಸ್ಥೆ ಪಾಲನೆಗೆ ತಯಾರಿಗಳ ಬಗ್ಗೆ ಸಮಗ್ರ ಪರಿಶೀಲನೆ:**

ಚುನಾವಣಾ ವೀಕ್ಷಕರು ಅವರ ಕಾರ್ಯವ್ಯಾಪ್ತಿಯ ಕ್ಷೇತ್ರಕ್ಕೆ ಆಗಮಿಸಿದ 3–4 ದಿನಗಳೊಳಗಾಗಿ ಸಂಬಂಧಿಸಿದ ಹಿರಿಯ ಪೋಲೀಸ್ ಅಧಿಕಾರಿಗಳೊಂದಿಗೆ ಇಬ್ಬರಿಗೂ ಅನುಕೂಲವಾಗುವ ಸಮಯದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ವಿವರವಾಗಿ ಚರ್ಚಿಸುವುದು.

a. ಅಗತ್ಯವಿರುವಷ್ಟು ಪೋಲೀಸ್ ಸಿಬ್ಬಂದಿಯ ಲಭ್ಯತೆ

b. ಕೇಂದ್ರ ಮೀಸಲು ಪಡೆ ಅಗತ್ಯತೆ ಬಗ್ಗೆ

c. ಕೈಗೊಂಡಿರುವ ಮುಂಜಾಗರೂಕತೆ ಕ್ರಮಗಳು (ಪ್ರತಿಬಂಧಕ ಸ್ಥಾನ ಬದ್ಧತೆಯಲ್ಲಿರುವ ವ್ಯಕ್ತಿಗಳ ಪಟ್ಟಿ, ಶಸ್ತ್ರಾಸ್ತ್ರಗಳನ್ನು ಪೋಲೀಸ್ ಠಾಣೆಗೆ ಒಪ್ಪಿಸಿರುವ ಬಗ್ಗೆ)

d. ಗುರುತಿಸಿರುವ ವಲ್ನರಬಲ್ ಪ್ರದೇಶಗಳು /ಮತಗಟ್ಟೆಗಳು

e. ಮತದಾನ ದಿನದಂದು ಪೋಲೀಸ್ ಸಿಬ್ಬಂದಿಯ ನಿಯೋಜನೆಯ ಕಾರ್ಯಯೋಜನೆ

f. ಮತದಾನ ದಿನದಂದು ವಿದ್ಯುನ್ಮಾನ ಮತಯಂತ್ರಗಳ ಸಾಗಣೆ, ಇತ್ಯಾದಿ.

ವಲ್ನರಬಲ್ ಪ್ರದೇಶಗಳನ್ನು ಗುರುತಿಸಿರುವ ಬಗ್ಗೆ ಹಾಗೂ ಮತಗಟ್ಟೆಗಳಿಗೆ ಹೆಚ್ಚುವರಿ ಪೋಲೀಸ್ ಸಿಬ್ಬಂದಿ ನಿಯೋಜಿಸುವ ಕಾರ್ಯಯೋಜನೆ ಹಾಗೂ ಪೋಲೀಸ್‌ಗಸ್ತು ಬಗ್ಗೆ ಬೇಕಾಗುವ ಹೆಚ್ಚು ಪೋಲೀಸ್ ಸಿಬ್ಬಂದಿ ಕುರಿತು ಪರಾಮರ್ಶಿಸುವುದು. ಕ್ಷೇತ್ರಗಳಲ್ಲಿನ (ವಾರ್ಡ್‌ಗಳಲ್ಲಿನ) ಬಾರ್, ಲಿಕ್ಕರ್ ಶಾಪ್‌ಗಳಲ್ಲಿ ದಾಸ್ತಾನಿನ ಬಗ್ಗೆ ಪರಿಶೀಲಿಸಿ ಚುನಾವಣೆ ಸಮಯದಲ್ಲಿ ಏನಾದರೂ ಹೆಚ್ಚುವರಿ ದಾಸ್ತಾನು, ವಿತರಣೆ ಮಾಡಿದ್ದಾರೆಯೆ ಎಂಬುದನ್ನು ಪರಿಶೀಲಿಸುವುದು.

**26) ಮಾದರಿ ನೀತಿ ಸಂಹಿತೆ ಅನುಷ್ಠಾನದ ಬಗ್ಗೆ ಪರಿವೀಕ್ಷಣೆ:**

ಮಾದರಿ ನೀತಿ ಸಂಹಿತೆಯನ್ನು ಪಕ್ಷಾತೀತವಾಗಿ, ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಚುನಾವಣಾ ವೀಕ್ಷಕರ ಅತೀ ಪ್ರಮುಖ ಹಾಗೂ ಮಹತ್ವದ ಕಾರ್ಯವಾಗಿದೆ.

ನೀವು ಕಟ್ಟುನಿಟ್ಟಿನ ನಿಗಾವಹಿಸಬೇಕಾದವುಗಳೆಂದರೆ,

a) ಪರವಾನಗಿ ಇಲ್ಲದೆ ವಾಹನಗಳನ್ನು ಚುನಾವಣೆ ಪ್ರಚಾರಕ್ಕೆ ಬಳಸುತ್ತಿರುವುದು.

b) ತೋಳ್ಬಲ ಉಪಯೋಗಿಸಿ ಮತದಾರರನ್ನು ಬೆದರಿಸುವುದು ಹಾಗೂ ಮತಚಲಾಯಿಸದಂತೆ ನಿರ್ಬಂಧಿಸುವುದು.

c) ಮತದಾರರನ್ನು ಸೆಳೆಯಲು ಹಣ, ಲಿಕ್ಕರ್ ಹಂಚಿಕೆ ಹಾಗೂ ಕಾಣಿಕೆ/ಉಡುಗೊರೆಗಳನ್ನು ನೀಡುವುದು.

d) ಮತದಾರರಲ್ಲಿ ಮತಬೇಧ ಉಂಟು ಮಾಡುವಂತಹ ಉದ್ರೇಕಕಾರಿ/ ಆಕ್ಷೇಪಣಾರ್ಹ ಭಾಷಣಗಳು, ಕೃತ್ಯಗಳು.

e) ಸಾರ್ವಜನಿಕ/ ಖಾಸಗಿ ಆಸ್ತಿ/ ಕಟ್ಟಡ ಇತ್ಯಾದಿಗಳನ್ನು ವಿರೂಪಗೊಳಿಸುವುದು.

**27) ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಲು/ ಅನುಷ್ಠಾನಕ್ಕೆ ತರಲು ಚುನಾವಣಾ ವೀಕ್ಷಕರ ಮಾರ್ಗ/ದೃಷ್ಟಿಕೋನ:**

ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಚುನಾವಣಾಧಿಕಾರಿಗಳಿಗೆ / ಜಿಲ್ಲಾಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ. ಚುನಾವಣಾ ವೀಕ್ಷಕರು ನೀತಿ ಸಂಹಿತೆ ಉಲ್ಲಂಘನೆ

ದೂರುಗಳನ್ನು DEO/RO ಗಳಿಂದ ಹಾಗೂ ಸ್ವತ: ತನಿಖೆ ನಡೆಸುವುದು. ನೀತಿ ಸಂಹಿತೆ ಉಲ್ಲಂಘನೆ ಘಟನೆಗಳನ್ನು ತಡೆಗಟ್ಟಲು ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಸೂಕ್ತ ಸಲಹೆ/ ಸೂಚನೆಗಳನ್ನು ನೀಡುವುದು. ಸೂಚನೆಗಳನ್ನು ನೀಡಿದ್ದರೂ ನೀತಿ ಸಂಹಿತೆ ಉಲ್ಲಂಘನೆ ಘಟನೆಗಳು ಮುಂದುವರೆದಲ್ಲಿ/ ಮರುಕಳಿಸಿದಲ್ಲಿ ತಕ್ಷಣ ಅಂತಹ ಘಟನೆಗಳನ್ನು ವಿಡಿಯೋಗ್ರಫಿ ಮಾಡಿಸುವುದು ಹಾಗೂ ಆಯೋಗಕ್ಕೆ ವರದಿ ಮಾಡುವುದು.

ಕೆಲವು ನಿರ್ದೇಶನಗಳನ್ನು ತಮ್ಮ ಮಾಹಿತಿಗಾಗಿ ಈ ಕೆಳಗೆ ನೀಡಲಾಗಿದೆ.

ಎ) ಪರವಾನಗಿ ಇಲ್ಲದೆ ವಾಹನದಲ್ಲಿ ಬ್ಯಾನರ್/ಬಾವುಟದೊಂದಿಗೆ ಚುನಾವಣಾ ಪ್ರಚಾರ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದ ಕೂಡಲೇ ಅಂತಹ ವಾಹನವನ್ನು ಮತ್ತು ವಾಹನದಲ್ಲಿದ್ದವರನ್ನು ದಸ್ತಗಿರಿ ಮಾಡುವಂತೆ ಕೂಡಲೇ ಸಂಬಂದಿಸಿದ ಪೋಲೀಸ್ ಅಧಿಕಾರಿಗೆ ದೂರವಾಣಿ ಮುಖಾಂತರ ಸೂಚಿಸುವುದು, ನಂತರ ಬರಹದಲ್ಲಿ ಸೂಚಿಸುವುದು. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು DEO/RO ಗಳು ಯಾವುದೇ ವೆಚ್ಚ ಬಾರದಂತೆ ಸುದ್ದಿ ಮಾಧ್ಯಮದ ಮೂಲಕ ನೀತಿ ಸಂಹಿತೆ ಉಲ್ಲಂಘನೆ ಘಟನೆಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ಸಾಕಷ್ಟು ಪ್ರಚಾರ ನೀಡುವುದು.

ಬಿ) ರಾಜಕೀಯ ಪಕ್ಷವು ಯಾವುದೋ ಒಂದು ಪ್ರದೇಶದಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿರುವುದಾಗಿ ದೂರುತ್ತಾರೆ. ಆದರೆ ದಾಸ್ತಾನು ಮಾಡಿರುವ ನಿರ್ದಿಷ್ಟ ಸ್ಥಳವನ್ನು ತಿಳಿಸುವುದಿಲ್ಲ. ಪೋಲೀಸ್ ದಾಳಿ ನಡೆಸುವಂತೆ ಒತ್ತಾಯಿಸುತ್ತಾರೆ. ಅಂತಹ ಸಂದರ್ಭದಲ್ಲಿ ವೀಕ್ಷಕರು ದೂರನ್ನು ಸ್ವೀಕರಿಸಿ ಗೌಪ್ಯವಾಗಿ ಸಂಬಂಧಿಸಿದ ಪೋಲೀಸ್ ಅಧಿಕಾರಿಗೆ ದಾಳಿ ನಡೆಸುವಂತೆ ಸೂಚಿಸುವುದು ಹಾಗೂ ವರದಿ ಸಲ್ಲಿಸುವಂತೆ ತಿಳಿಸುವುದು. ಅವರೊಂದಿಗೆ ವಿಡಿಯೋಗ್ರಾಫರ್‌ನನ್ನು ಜೊತೆಯಲ್ಲಿ ಕಳುಹಿಸಿ, ದಾಳಿ ಸಂದರ್ಭದ ವಿಡಿಯೋ ಚಿತ್ರಣ ಮಾಡಿಸುವುದು. ಇಂತಹ ಸಂದರ್ಭಗಳಲ್ಲಿ ವೀಕ್ಷಕರು ಯೋಚಿಸಿ ಸ್ವಯಂ ನಿರ್ಧಾರ ಕೈಗೊಳ್ಳಬೇಕು ಯಾವುದೇ ಪಕ್ಷದ ವ್ಯಕ್ತಿಯೊಂದಿಗೆ ಹೋಗಬಾರದು.

ಸಿ) ಎಲ್ಲಾ ರಾಜಕೀಯ ಪಕ್ಷಗಳು ತಾರಾ ಪ್ರಚಾರಕರನ್ನು (Star campaigners) ಹೊಂದಿರುತ್ತವೆ. ಯಾವುದಾದರೂ ಇಂತಹ ತಾರಾ ಪ್ರಚಾರಕರು ಉದ್ರೇಕಕಾರಿಯಾದ ಸಮಾಜದ ಒಂದು ನಿರ್ದಿಷ್ಟ ಜನಾಂಗದ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಭಾಷಣ ಮಾಡಿರುವುದನ್ನು ಮಾಧ್ಯಮದವರು ವಿಸ್ತಾರವಾಗಿ ಪ್ರಕಟಿಸಿದರೆ ಇಂತಹ ಘಟನೆಗಳನ್ನು ಭಾಷಣಗಳನ್ನು ವಿಡಿಯೋಗ್ರಫಿ ಮಾಡಿದ್ದಲ್ಲಿ, ಅದರ ಪ್ರತಿಯೊಂದಿಗೆ ಆಯೋಗಕ್ಕೆ ವರದಿ ಮಾಡುವುದು.

ಡಿ) ಪೋಸ್ಟರನ್ನು ಅಂಟಿಸಿ ಹಾಗೂ ಬ್ಯಾನರ್‌ಗಳನ್ನು ಕಟ್ಟಿ ಸಾರ್ವಜನಿಕ ಆಸ್ತಿಯನ್ನು ವಿರೂಪಗೊಳಿಸಿರುವುದನ್ನು ನೀವು ಕಂಡಲ್ಲಿ, ಇದು ತೀವ್ರವಾದ ನೀತಿ ಸಂಹಿತೆ ಉಲ್ಲಂಘನೆಯಾದುದರಿಂದ ತಕ್ಷಣ DEO/RO ಗೆ ವಿಷಯ ತಿಳಿಸಿ, ಅಂತಹ ಪೋಸ್ಟರ್ ಬ್ಯಾನರ್‌ಗಳನ್ನು ತೆರವುಗೊಳಿಸಲು ಜಾರಿದಳವನ್ನು ಕಳುಹಿಸುವಂತೆ ಸೂಚಿಸುವುದು ಹಾಗೂ ಇದನ್ನು ವಿಡಿಯೋಗ್ರಾಫಿ ಮಾಡಿಸುವುದಲ್ಲದೆ ವೆಚ್ಚವನ್ನು ಸಂಬಂಧಿಸಿದ ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಸೇರಿಸುವುದು.

ಆಯೋಗವು ವೀಕ್ಷಕರು ಸ್ವತಃ ನೀತಿ ಸಂಹಿತೆ ಜಾರಿಗೊಳಿಸುವುದಕ್ಕಿಂತ ಪರಿಣಾಮಕಾರಿ ಉಸ್ತುವಾರಿ/ ವೀಕ್ಷಣೆಯನ್ನು ಉತ್ತೇಜಿಸುತ್ತದೆ. ಚುನಾವಣಾ ಪ್ರಚಾರದ ಪ್ರತಿಯೊಂದು ಕ್ರಿಯೆಯ ವೆಚ್ಚವನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಯು ಪ್ರಚಾರಕ್ಕಾಗಿ ಪಡೆದುಕೊಂಡಿರುವ ಸಾಧನಗಳ ವಿವರಗಳನ್ನು ಪಡೆದುಕೊಂಡು, ಯಾವುದಾದರೂ ಪ್ರಚಾರದ ಬಗೆಗಿನ ವೆಚ್ಚವನ್ನು ಅಭ್ಯರ್ಥಿಯು ಮರೆಮಾಚಿದ್ದಲ್ಲಿ ತಾವೇ ಸ್ವತ: ಮಾನದಂಡ ಅನುಸರಿಸಿ ದರ ನಿಗದಿಪಡಿಸಿ ಅದನ್ನು ಆ ಅಭ್ಯರ್ಥಿಯ ವೆಚ್ಚಕ್ಕೆ ಸೇರಿಸುವುದು. ನೀತಿ ಉಲ್ಲಂಘನೆಗಳ ಬಗ್ಗೆ ಸಮಯೋಜಿತವಾಗಿ ಸೂಕ್ತ ಕ್ರಮಕೈಗೊಳ್ಳುವುದನ್ನು ಹಾಗೂ ಕೈಗೊಂಡ ಕ್ರಮಗಳನ್ನು ವರದಿ ಮಾಡುವುದನ್ನು ಆಯೋಗ ನಿರೀಕ್ಷಿಸುತ್ತದೆ.

**28) ಅಭ್ಯರ್ಥಿಗಳು/ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರದ ವೆಚ್ಚಗಳ ಮೇಲೆ ನಿಗಾವಹಿಸುವುದು:**

ಹಣಬಲವು ಚುನಾವಣೆಯನ್ನು ಕಲುಷಿತಗೊಳಿಸುತ್ತದೆ. ಆದುದರಿಂದ ಮತದಾರರನ್ನು ಸೆಳೆಯುವ ಉದ್ದೇಶದಿಂದ, ಗುಟ್ಟಾಗಿ ಹಾಗೂ ಅನೇಕ ವಾಮಮಾರ್ಗಗಳಿಂದ ಮಾಡಿದ ವೆಚ್ಚಗಳ ಬಗ್ಗೆ ವೀಕ್ಷಕರು ವಾಚ್‌ಡಾಗ್ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಹಣಬಲವು ರಾಜಕೀಯ ಪಕ್ಷಗಳಿಂದ ಅಭ್ಯರ್ಥಿಯಾಗಲು ಟಿಕೆಟ್ ಪಡೆಯುವ ಹಂತದಿಂದ ಪ್ರಾರಂಭವಾಗುತ್ತದೆ. ತದನಂತರ ಅದು ವಿವಿಧ ರೂಪಗಳನ್ನು ಪಡೆಯುತ್ತದೆ. ಈ ಕೆಳಗೆ ನೀಡಿರುವ ಹಣ ವೆಚ್ಚಮಾಡುವ ಮಾರ್ಗಗಳು ಒಂದು ಸೂಚಕ ಮಾತ್ರ ಬೇರೆ ಬೇರೆ ವಿವಿಧ ಮಾರ್ಗಗಳ ಮೂಲಕ ಖರ್ಚು ಮಾಡುವ ಬಗ್ಗೆಯೂ ವೀಕ್ಷಕರು ನಿಗಾವಹಿಸಬೇಕು.

1) ಫ್ಲೋಟಿಂಗ್ (Floating) ಮತಗಳನ್ನು ಸೆಳೆಯಲು ಮತಗಟ್ಟೆವಾರು ಏಜೆಂಟರುಗಳ ಮೂಲಕ ಹಣ ಪಾವತಿಸುವುದು.
2) ಕ್ಲಬ್‌ಗಳು ಮತ್ತು ಸಂಸ್ಥೆಗಳಿಗೆ ಅವುಗಳ ಸದಸ್ಯರುಗಳ ಮತ ಸೆಳೆಯಲು ದೊಡ್ಡಮೊತ್ತದ ದೇಣಿಗೆ ನೀಡುವುದು.
3) ಮತದಾರರಿಗೆ ನೀಡುವುದಕ್ಕಾಗಿ ಪಕ್ಷದ ಕಾರ್ಯಕರ್ತರಿಗೆ ಉದಾರ ಕೊಡುಗೆ ನೀಡುವುದು
4) ಸಭೆಗಳಿಗೆ ಸಾರ್ವಜನಿಕರನ್ನು ಹಣ ನೀಡಿ ಕರೆತರುವುದು.
5) ಹಣ ನೀಡಿ ಜನ ಕರೆತಂದು ಮೆರವಣಿಗೆ, ಪ್ರಚಾರ ನಡೆಸುವುದು.
6) ಅಭ್ಯರ್ಥಿಗಳು ಸಾಮೂಹಿಕ ವಿವಾಹ, ಪೂಜೆ, ಉದ್ಘಾಟನೆ ಇತ್ಯಾದಿಗಳಲ್ಲಿ ಭಾಗವಹಿಸಿ, ಉಡುಗೊರೆಗಳನ್ನು ನೀಡುವುದು.
7) ಅಭ್ಯರ್ಥಿಗಳು ಚಾರಿಟಿ ಸಂಸ್ಥೆ ಅಥವಾ ವಿದ್ಯಾ ಸಂಸ್ಥೆಗಳಲ್ಲಿ ಸನ್ಮಾನ ಪಡೆಯುವುದು.
8) ಮತದಾರರಿಗೆ ಲಿಕ್ಕರ್ ಅಥವಾ ಲಿಕ್ಕರ್‌ಪಾಸುಗಳನ್ನು ವಿತರಿಸುವುದು.
9) ಚುನಾವಣೆಗೆ ಡಮ್ಮಿ ಅಭ್ಯರ್ಥಿಯನ್ನು ನಿಲ್ಲಿಸಿ ಅವರ ವಾಹನ ಇತ್ಯಾದಿ ಸೌಲಭ್ಯಗಳನ್ನು ಪಡೆಯುವುದು.
10) ಸಂಬಂಧವಿಲ್ಲದ ವ್ಯಕ್ತಿಗಳ ಹೆಸರಿನಲ್ಲಿ ಚುನಾವಣಾ ಪ್ರಚಾರಕ್ಕಾಗಿ ಮಾಧ್ಯಮ ಬಳಸುವುದು ಕರಪತ್ರ ಇತ್ಯಾದಿ ಹಂಚುವುದು.
11) ಸಿನಿಮಾ ತಾರೆಯರನ್ನು ಹಾಗೂ ಕ್ರೀಡಾ ಪಟುಗಳನ್ನು ಕರೆಯಿಸಿ ಪ್ರಚಾರ ಮಾಡುವುದು.
12) ಮತದಾರರಿಗೆ ಉಚಿತವಾಗಿ ಕೊಡೆ, ಟೋಪಿ, ಸೈಕಲ್, ವಾಚು ಇತ್ಯಾದಿ ನೀಡುವುದು.

ಆಯೋಗವು ನೀಡಿರುವ ಮಾರ್ಗಸೂಚಿಗಳನ್ನು ಯಾವುದೇ ಲೋಪವಿಲ್ಲದಂತೆ ಕಟ್ಟುನಿಟ್ಟಾಗಿ ಪಾಲಿಸುವುದು ಚುನಾವಣಾ ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಆದುದರಿಂದ ನೀವು ಆಯೋಗವು ಸಿದ್ದಪಡಿಸಿರುವ ಚುನಾವಣಾಧಿಕಾರಿಗಳ ಕೈಪಿಡಿ, ಪ್ರಿಸೈಡಿಂಗ್ ಅಧಿಕಾರಿಗಳ ಕೈಪಿಡಿ, ಪೋಲಿಂಗ್ ಹಾಗೂ ಎಣಿಕೆ ಏಜೆಂಟರ ಕೈಪಿಡಿಗಳನ್ನು ಮತ್ತು EVM manual ಗಳನ್ನು ಮನನ ಮಾಡಿಕೊಳ್ಳುವುದು.

**29) ಚುನಾವಣೆ ವೆಚ್ಚಗಳ ಬಗೆಗಿನ ವಿವಿಧ ಸೂಚನೆಗಳ ಸಂಕ್ಷಿಪ್ತ ಮಾಹಿತಿಗಳನ್ನು ಈ ಕೆಳಗೆ ನೀಡಲಾಗಿದೆ:**

1) ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976ರ ಪ್ರಕರಣ 26–ಎ ಪ್ರಕಾರ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಅವರು ಅಥವಾ ಅವರ ಚುನಾವಣಾ ಏಜೆಂಟ್‌ರವರು ಚುನಾವಣೆಗೆ ನಾಮಪತ್ರ ಸಲ್ಲಿಸಿದ ದಿನಾಂಕದಿಂದ ಫಲಿತಾಂಶ ಘೋಷಣೆಯಾದ ದಿನಾಂಕದ ವರೆಗಿನ(ಎರಡೂ ದಿನ ಸೇರಿ) ನೈಜವಾದ ಚುನಾವಣಾ ವೆಚ್ಚದ ಲೆಕ್ಕದ ವಿವರಗಳನ್ನು ಇಟ್ಟಿರಬೇಕು. ಲೆಕ್ಕಪತ್ರಗಳಿಗೆ ಮತ್ತು ಅಫಿಡವಿಟ್‌ಗೆ ಅಭ್ಯರ್ಥಿಯೇ ಸಹಿ ಮಾಡಿರಬೇಕು.

2) ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನಗಳೊಳಗಾಗಿ ಚುನಾವಣಾಧಿಕಾರಿಗಳಿಗೆ ಪ್ರಕರಣ 26–ಎ ರಂತೆ ನಿರ್ವಹಿಸಿರುವ ಚುನಾವಣೆ ವೆಚ್ಚ ಲೆಕ್ಕ ವಿವರಗಳ ಎಲ್ಲಾ ಪ್ರತಿಯನ್ನು ಸಲ್ಲಿಸಬೇಕು.

3) ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವ ವಿಧಾನ ಹಾಗೂ ಅವಧಿಯೊಳಗೆ ಚುನಾವಣೆ ವೆಚ್ಚದ ಲೆಕ್ಕ ವಿವರ ಸಲ್ಲಿಸಲು ವಿಫಲರಾದಲ್ಲಿ ರಾಜ್ಯ ಚುನಾವಣಾ ಆಯೋಗವು ಅಂತಹ ಅಭ್ಯರ್ಥಿಗಳನ್ನು 3ವರ್ಷಗಳ ಅವಧಿಗೆ ಅನರ್ಹಗೊಳಿಸಿ ಆದೇಶ ಹೊರಡಿಸಿ ರಾಜ್ಯ ಗೆಜೆಟಿನಲ್ಲಿ ಪ್ರಕಟಿಸುವುದು.

4) ಚುನಾವಣಾ ಕಣದಲ್ಲಿದ್ದ ಅಭ್ಯರ್ಥಿಗಳು ಚುನಾವಣೆಯಲ್ಲಿ ಗಂಭೀರವಾಗಿ ಸ್ಪರ್ಧಿಸದೆ ಇದ್ದರೂ ಅವರು ಠೇವಣಿ ಇತ್ಯಾದಿ ಅತ್ಯಲ್ಪ ವೆಚ್ಚ ಮಾತ್ರ ಮಾಡಿದ್ದರೂ, ಅಂತಹವರೂ ಸಹ ಚುನಾವಣೆ ವೆಚ್ಚದ ಲೆಕ್ಕ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು.

5) ಪ್ರತಿದಿನದ ಚುನಾವಣೆ ವೆಚ್ಚದ ಲೆಕ್ಕ ವಿವರಗಳನ್ನು ಎಲ್ಲಾ ವೋಚರ್‌ಗಳೊಂದಿಗೆ ನಿಯಮಗಳಲ್ಲಿ ನಿಗಧಿಪಡಿಸಿರುವ ನಮೂನೆಗಳಲ್ಲಿ ನಮೂದಿಸಬೇಕು.

6) ಚುನಾವಣೆ ವೆಚ್ಚದ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಪ್ರಮಾಣ ಪತ್ರದೊಂದಿಗೆ ಸಲ್ಲಿಸಬೇಕು.

7) ಪ್ರತಿದಿನದ ಚುನಾವಣೆ ವೆಚ್ಚಗಳಿಗೆ ಸಂಬಂಧಿಸಿದ ವೋಚರ್‌ಗಳ ಮೇಲೆ ಅಭ್ಯರ್ಥಿ ಅಥವಾ ಅವರ ಚುನಾವಣಾ ಏಜೆಂಟರ ಪೂರ್ಣಸಹಿ ಇರಬೇಕು.

8) ಅಭ್ಯರ್ಥಿಯು ನಿರ್ವಹಿಸಿದ ಪ್ರತಿದಿನದ ಚುನಾವಣಾ ವೆಚ್ಚದ ಲೆಕ್ಕದ ವಿವರಗಳನ್ನು ವೋಚರ್‌ಗಳೊಂದಿಗೆ ಚುನಾವಣಾಧಿಕಾರಿ/ವೀಕ್ಷಕರಿಗೆ ಅವರು ಕೇಳಿದಾಗಲೆಲ್ಲಾ ಒದಗಿಸಬೇಕು.

9) ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ವಾರ್ಡ್‌ಗಳಲ್ಲಿ ಸ್ಪರ್ಧಿಸಿದ್ದಲ್ಲಿ ಸ್ಪರ್ಧಿಸಿರುವ ಪ್ರತಿ ವಾರ್ಡ್‌ಗೆ ಸಂಬಂಧಿಸಿದಂತೆ ಪ್ರತ್ಯೇಕ ವೆಚ್ಚ ವಿವರಗಳನ್ನು ನಿರ್ವಹಿಸಬೇಕು ಹಾಗೂ ಸಲ್ಲಿಸಬೇಕು.

10) ವೀಕ್ಷಕರಿಗೆ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಲೆಕ್ಕಗಳನ್ನು ಪರಿಶೀಲಿಸಲು ಸಹಕರಿಸುವ ಸಲುವಾಗಿ ಆಯೋಗದಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುತ್ತಿದ್ದು, ಅವರು ನಿರ್ವಹಿಸುವ ಕರ್ತವ್ಯಗಳು ಕೆಳಕಂಡಂತಿವೆ.

**30) ನೋಡಲ್ ಅಧಿಕಾರಿಗಳ ಕರ್ತವ್ಯಗಳು :**

a. ನೋಡಲ್ ಅಧಿಕಾರಿ ತನ್ನ ನೇಮಕಾತಿ ಆದೇಶ ಸ್ವೀಕರಿಸಿದ ನಂತರ ತನಗೆ ನಿಗದಿಪಡಿಸಿದ ವಾರ್ಡ್‌ನ ವೀಕ್ಷಕರಿಗೆ ವರದಿ ಮಾಡಿಕೊಳ್ಳುವರು. ಆ ವಾರ್ಡಿನ ರಿಟರ್ನಿಂಗ್ ಅಧಿಕಾರಿಯೊಂದಿಗೆ ಸತತ ಸಂಪರ್ಕದಲ್ಲಿರುವರು.

b. ನೋಡಲ್ ಅಧಿಕಾರಿ ಸಂಬಂಧಿಸಿದ ವಾರ್ಡಿನಲ್ಲಿ ನಿಗದಿಪಡಿಸಿದ ಕಟ್ಟಡದಲ್ಲಿ ಲಭ್ಯವಿರಬೇಕು. ಅಭ್ಯರ್ಥಿಗಳಿಂದ ವೆಚ್ಚ ವಿವರ ಸ್ವೀಕರಿಸಬೇಕು.

c. ನೋಡಲ್ ಅಧಿಕಾರಿಯ ಕರ್ತವ್ಯಗಳು ನಾಮಪತ್ರ ಸ್ವೀಕಾರದಿಂದ ಪ್ರಾರಂಭವಾಗುತ್ತದೆ.

d. ಅಭ್ಯರ್ಥಿಯು ನಾಮಪತ್ರ ಸಲ್ಲಿಕೆಯಂದು ರಿಟರ್ನಿಂಗ್ ಅಧಿಕಾರಿಗಳ ಕಛೇರಿಗೆ ಬಂದಾಗ ಅಭ್ಯರ್ಥಿಯೊಂದಿಗಿನ ವಾಹನಗಳು ಹಾಗೂ ವ್ಯಕ್ತಿಗಳ ವಿವರ ನೀಡಬೇಕು. ಈ ಘಟನೆಯನ್ನು ನೋಡಲ್ ಅಧಿಕಾರಿಯು ವಿಡಿಯೋ ಚಿತ್ರಣ ಮಾಡಿಸಬೇಕು.

e. ನೋಡಲ್ ಅಧಿಕಾರಿ ಚುನಾವಣಾ ಕ್ಷೇತ್ರದೊಳಗೆ ಚುನಾವಣಾ ಪ್ರಾರಂಭದಿಂದ ವೆಚ್ಚ ವಿವರ ಸಲ್ಲಿಸುವ ಗಡುವು ಮುಗಿಯುವವರೆವಿಗೂ ಲಭ್ಯವಿರಬೇಕು.

f. ದೈನಂದಿನ ವೆಚ್ಚ ವಿವರ ಸಲ್ಲಿಸುವ ಅಭ್ಯರ್ಥಿಗಳ ಪಟ್ಟಿ ತಯಾರಿಸುವುದು.

g. ಪ್ರತಿ ಅಭ್ಯರ್ಥಿಗಾಗಿ ಪ್ರತ್ಯೇಕ ಕಡತ ತೆರೆದು ಸಲ್ಲಿಸಿದ ಮಾಹಿತಿಯನ್ನು ದಿನವಹಿ ಸೇರಿಸುವುದು.

h. ಪ್ರತಿ ಅಭ್ಯರ್ಥಿಗೂ ಪ್ರತ್ಯೇಕ ವಹಿ ನಿರ್ವಹಿಸಿ ಅದರಲ್ಲಿ ನೀಡಿದ ವಿವರ ನಮೂದಿಸುವುದು ಹಾಗೂ ಅಭ್ಯರ್ಥಿಯು ಹಾಜರು ಪಡಿಸುವ ಲೆಕ್ಕ ಪತ್ರ ವಹಿಯನ್ನು ಪರಿಶೀಲಿಸಿದ ಬಗ್ಗೆ ನೋಡಲ್ ಅಧಿಕಾರಿಯು ಸಹಿ ಮಾಡತಕ್ಕದ್ದು.

i. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ, ನಿಯಮದಡಿ ನಿರ್ದೇಶಿಸಿದಂತೆ ಅಭ್ಯರ್ಥಿಗಳು ನೀಡುವ ವೋಚರ್‌ಗಳನ್ನು ತಪ್ಪದೇ ಪರಿಶೀಲಿಸುವುದು.

j. ಅಭ್ಯರ್ಥಿ ವೆಚ್ಚಗಳನ್ನು ಕಡಿಮೆ ನಮೂದಿಸಿದಲ್ಲಿ ಲಭ್ಯವಿರುವ Standard rate ಗೆ ಹೊಂದಾಣಿಕೆ ಮಾಡಿಕೊಳ್ಳುವುದು.

k. ವೋಚರ್ ನೀಡದಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯು ನೀಡಿದ ನೋಟೀಸ್ ನೀಡುವುದು.

l. ವೆಚ್ಚ ವಿವರ ಸಲ್ಲಿಕೆಯ ಪ್ರತಿಯಲ್ಲಿನ ಅಭ್ಯರ್ಥಿಯ ಸಹಿಯನ್ನು ಪ್ರಮಾಣೀಕರಿಸಿ ನೋಡುವುದು.

m. ನೋಡಲ್ ಅಧಿಕಾರಿಯು ಅಭ್ಯರ್ಥಿ ಮಾಡುವ ಘೋಷಣೆಯನ್ನು ಪ್ರಮಾಣೀಕರಿಸಿ ನೋಡಬೇಕು. ತಪ್ಪಾಗಿ ಘೋಷಣೆ ಮಾಡಿದ್ದಲ್ಲಿ ದಂಡ/ಮತ್ತು ಶಿಕ್ಷೆಗೊಳಪಡಿಸಬಹುದಾದ್ದರಿಂದ ಅದಕ್ಕೆ ಪೂರಕ ದಾಖಲಾತಿಗಳ ಸಂಗ್ರಹ ಮಾಡುವುದು.

n. ಅಭ್ಯರ್ಥಿಗಳಿಂದ ಸ್ವೀಕರಿಸಿದ ವೆಚ್ಚ ವಿವರಕ್ಕೆ ಸ್ವೀಕೃತಿ ನೀಡುವುದು.

o. ವಾರದಲ್ಲಿ ಕನಿಷ್ಠ ಎರಡು ಬಾರಿ ಅಭ್ಯರ್ಥಿಗಳು ನೀಡಿದ ವೆಚ್ಚ ವಿವರಗಳು ಹಾಗೂ ಷರಾಗಳನ್ನು ವೀಕ್ಷಕರಿಗೆ ಸಲ್ಲಿಸುವುದು.

p. ನೋಡಲ್ ಅಧಿಕಾರಿಗಳು ನೀಡುವ ಚುನಾವಣಾ ವೆಚ್ಚ ವಿವರವನ್ನು ವೀಕ್ಷಕರು ತಾಳೆ ಮಾಡಿದಾಗ ನ್ಯೂನತೆ ಕಂಡುಬಂದಲ್ಲಿ ಅದನ್ನು ಪಟ್ಟಿ ಮಾಡಿ ನೋಡಲ್ ಅಧಿಕಾರಿಗೆ ನೀಡುವರು. ಅದರನ್ವಯ ಅಭ್ಯರ್ಥಿಗಳಿಗೆ ನೋಡಲ್ ಅಧಿಕಾರಿಯು ನೋಟೀಸ್ ನೀಡುವುದು.

q. ವೀಕ್ಷಕರ ಸೂಚನೆಯನ್ವಯ ನೋಡಲ್ ಅಧಿಕಾರಿಗಳು ಕಾರ್ಯ ನಿರ್ವಹಿಸುವುದು.

r. ನೋಡಲ್ ಅಧಿಕಾರಿಗಳು ತಮ್ಮ ವರದಿಯನ್ನು ನಿಗದಿತ ಚೆಕ್‌ಮೆಮೋ (ಅನುಬಂಧ– 7)

ರಲ್ಲಿ ಸಲ್ಲಿಸುವುದು.

1) ನೋಡಲ್ ಅಧಿಕಾರಿಗಳ ಕರ್ತವ್ಯಗಳನ್ನು ವೀಕ್ಷಕರು ಮೇಲ್ವಿಚಾರಣೆ ನಡೆಸುವುದು.

2) ಯಾರಾದರೂ ಅಭ್ಯರ್ಥಿಯು ನೋಟೀಸು ನೀಡಿದ ನಂತರವೂ ಚುನಾವಣೆ ವೆಚ್ಚದ ಲೆಕ್ಕ ವಿವರಗಳನ್ನು ಚುನಾವಣಾಧಿಕಾರಿ/ವೀಕ್ಷಕರಿಗೆ ಒದಗಿಸದಿದ್ದಲ್ಲಿ ಅಂತಹವರ ವಿರುದ್ದ ಐಪಿಸಿ ಸೆಕ್ಷನ್ 171-I ಪ್ರಕಾರ ದೂರು ದಾಖಲಿಸತಕ್ಕದ್ದು.

3) ಪ್ರತಿದಿನದ ಚುನಾವಣೆ ವೆಚ್ಚದ ಲೆಕ್ಕ ವಿವರಗಳ ಪ್ರತಿಯನ್ನು ಯಾರಾದರೂ ಕೋರಿದಲ್ಲಿ ನಿಗಧಿತ ಶುಲ್ಕ/ ಜೆರಾಕ್ಸ್ ಚಾರ್ಜ್‌ಸ್ ಪಡೆದು ನೀಡುವುದು.

4) ಯಾರಾದರೂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಮುಂಚೆಯೇ ಚುನಾವಣೆ ಪ್ರಚಾರಕ್ಕಾಗಿ ಪ್ರಚಾರ ಸಾಮಗ್ರಿಗಳು, ಇನ್ನಿತರೆಯವುಗನ್ನು ತಯಾರಿಸಿದ್ದಲ್ಲಿ ಅವುಗಳ ವೆಚ್ಚಗಳನ್ನು ಸಹ ಚುನಾವಣಾ ವೆಚ್ಚಗಳೆಂದು ಲೆಕ್ಕಕ್ಕೆ ಸೇರಿಸುವುದು.

5) ರಾಜಕೀಯ ಪಕ್ಷಗಳ ಮುಖಂಡರು ಚುನಾವಣಾ ಪ್ರಚಾರಕ್ಕೆ ಆಗಮಿಸಲು ತಗಲುವ ಪ್ರಯಾಣ ವೆಚ್ಚ ಇತ್ಯಾದಿಯನ್ನು ಚುನಾವಣೆ ವೆಚ್ಚಗಳೆಂದು ಪರಿಗಣಿಸುವಂತಿಲ್ಲ ಅಂತಹ ಮುಖಂಡರ ಹೆಸರುಗಳನ್ನು ಮೊದಲೇ ಆರ್‌ಓ/ವೀಕ್ಷಕರಿಗೆ ತಿಳಿಯಪಡಿಸಿರಬೇಕು ಹಾಗೆ ತಿಳಿಸದಿದ್ದ ಪಕ್ಷದಲ್ಲಿ ಚುನಾವಣೆ ವೆಚ್ಚಗಳ ಲೆಕ್ಕಕ್ಕೆ ಸೇರಿಸುವುದು.

6) ಅಭ್ಯರ್ಥಿಯು ಚುನಾವಣಾ ಪ್ರಚಾರಕ್ಕಾಗಿ ಉಪಯೋಗಿಸುವ ಎಲ್ಲಾ ವಾಹನಗಳ (ದ್ವಿಚಕ್ರ ವಾಹನಗಳಾದ ಸ್ಕೂಟರ್, ಮೊಪೆಡ್ ಬೈಕ್ ಸೇರಿದಂತೆ) ವೆಚ್ಚಗಳನ್ನು ಚುನಾವಣೆ ವೆಚ್ಚದ ಲೆಕ್ಕಗಳಿಗೆ ಸೇರಿಸತಕ್ಕದ್ದು.

7) ಯಾವುದಾದರೂ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಚುನಾವಣಾ ಪ್ರಚಾರಕ್ಕಾಗಿ ಜಾಹಿರಾತು, ಪೋಸ್ಟರ್, ಬ್ಯಾನರ್ ಇತ್ಯಾದಿ ಸಿದ್ದಪಡಿಸಿ ಪ್ರಚಾರಕ್ಕೆ ಬಳಸಿದ್ದಲ್ಲಿ ಅಂತವುಗಳಿಗೆ ಸಂಬಂದಿಸಿದ ವೆಚ್ಚವನ್ನು ಚುನಾವಣೆ ವೆಚ್ಚಗಳಿಗೆ ಸೇರಿಸುವುದು. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಸಂಬಂಧದಲ್ಲಿ ವೆಚ್ಚವನ್ನು ಮಾಡಿದ್ದಲ್ಲಿ, ವೆಚ್ಚವನ್ನು ಸಮಾನವಾಗಿ ವಿಭಾಗಿಸಿ ಅಭ್ಯರ್ಥಿಗಳ ವೆಚ್ಚಗಳಿಗೆ ಸೇರಿಸುವುದು.

8) ರಾಜಕೀಯ ಮುಖಂಡರ ಪ್ರಚಾರ ಸಭೆಗಳಲ್ಲಿ ಮಾಡಿದ ಬ್ಯಾರಿಕೇಡಿಂಗ್ ಇತ್ಯಾದಿಗೆ ಸಂಬಂದಿಸಿದ ವೆಚ್ಚಗಳನ್ನು ಯಾವ ಅಭ್ಯರ್ಥಿಯ ವಾರ್ಡಿನಲ್ಲಿ ಸಭೆ/ ಸಮಾರಂಭ ಏರ್ಪಡಿಸಲಾಗಿತ್ತೋ ಆ ಅಭ್ಯರ್ಥಿಯ ಲೆಕ್ಕಕ್ಕೆ ಸೇರಿಸುವುದು. ಸರ್ಕಾರಿ ಇಲಾಖೆಗಳು ಇಂತಹವುಗಳನ್ನು ಮಾಡಿದ್ದಲ್ಲಿ ಸಂಬಂಧಿಸಿದ ಇಲಾಖೆಗಳಿಂದ ವೆಚ್ಚ ವಿವರಗಳನ್ನು ಪಡೆಯುವುದು. ಈ ವಿವರಗಳನ್ನು DEO/ RO ಗಳಿಗೆ ತಿಳಿಸುವುದು. ಇಂತಹ ಸಭೆ/ಸಮಾರಂಭಗಳನ್ನು ಸ್ವಂತ ಖರ್ಚಿನಲ್ಲಿ ಏರ್ಪಡಿಸಿದ್ದರೂ ವೆಚ್ಚಗಳನ್ನು ಅವರ ಚುನಾವಣಾ ವೆಚ್ಚಗಳ ಲೆಕ್ಕಕ್ಕೆ ಸೇರಿಸುವುದು.

ಯಾವುದೇ ಅಭ್ಯರ್ಥಿಗಳು ನಿಯಮಗಳನ್ನು ಪಾಲಿಸದಿದ್ದರೆ ಚುನಾವಣೆ ವೆಚ್ಚಗಳ ಲೆಕ್ಕಗಳನ್ನು ಸರಿಯಾಗಿ ನಿರ್ವಹಿಸದೆ ದುರ್ನಡತೆ ದುರ್ಮಾರ್ಗಗಳನ್ನು ಅನುಸರಿಸಿದಲ್ಲಿ ಅಂತಹವರಿಗೆ DEO/RO ಮೂಲಕ ನೋಟೀಸು ನೀಡುವುದು.

**31) ಮತಗಟ್ಟೆ ಸಿಬ್ಬಂದಿ ನೇಮಕಾತಿ, ತರಬೇತಿ ಮತ್ತು ತಯಾರಿ:**

ಮತಗಟ್ಟೆವಾರು ಮತಗಟ್ಟೆ ಸಿಬ್ಬಂದಿಗಳನ್ನು ಆಯೋಗವು ನೀಡಿರುವ ನಿರ್ದೇಶನದಂತೆ ರ್‍ಯಾಂಡಮೈಸೇಷನ್ ಕ್ರಮವನ್ನು ಅನುಸರಿಸಿ ಹಂಚಿಕೆ ಮಾಡಲಾಗಿರುವ ಬಗ್ಗೆ ಮತ್ತು ಅವಶ್ಯಕವಿರುವಷ್ಟು ಸಂಖ್ಯೆಯ ಸಿಬ್ಬಂದಿಯನ್ನು ಈಗಾಗಲೇ ಗುರುತಿಸಿ ನಿಯೋಜಿಸಲು ಕ್ರಮ ಕೈಗೊಂಡಿರುವ ಬಗ್ಗೆ ಪರಿಶೀಲಿಸತಕ್ಕದ್ದು.

ಮತಗಟ್ಟೆಗಳಿಗೆ ನೇಮಕ ಮಾಡುವ ಸಿಬ್ಬಂದಿಗಳಿಗೆ ಅವರು ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಸಾಕಷ್ಟು ತಿಳುವಳಿಕೆ ನೀಡುವ ಸಲುವಾಗಿ ಅವರಿಗೆ ತರಬೇತಿಯನ್ನು ನೀಡುವುದು ಅವಶ್ಯಕವಾಗಿರುತ್ತದೆ. ಚುನಾವಣಾ ವೀಕ್ಷಕರು ಮತಗಟ್ಟೆ ಸಿಬ್ಬಂದಿಗಳ ತರಬೇತಿ ಬಗ್ಗೆ ನಿಗಾ ವಹಿಸತಕ್ಕದ್ದು. ಈ ಮತಗಟ್ಟೆ ಸಿಬ್ಬಂದಿ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳ ಬಗ್ಗೆ ಗಮನಿಸತಕ್ಕದ್ದು.

1) ಎಲ್ಲಾ ಮತಗಟ್ಟೆ ಸಿಬ್ಬಂದಿಗೂ ಅವಶ್ಯಕ ತರಬೇತಿ ನೀಡಿರುವ ಬಗ್ಗೆ.

2) ಮತಗಟ್ಟೆ ಸಿಬ್ಬಂದಿಗೆ ತರಬೇತಿ ನೀಡುವ ತರಬೇತುದಾರರು ಚುನಾವಣಾ ವಿಷಯದಲ್ಲಿ ಸಾಕಷ್ಟು ಅನುಭವ ಹೊಂದಿರುವವರಾಗಿರತಕ್ಕದ್ದು.

3) ತರಬೇತಿಯನ್ನು ಕಡಿಮೆ ಸಂಖ್ಯೆಯಲ್ಲಿ ಗುಂಪುಗಳಾಗಿ ಮಾಡಿ ನೀಡತಕ್ಕದ್ದು. ಹೆಚ್ಚಿನ ಸಂಖ್ಯೆಯಲ್ಲಿ ಗುಂಪುಗಳಾಗಿ ಮಾಡಿ ತರಬೇತಿ ನೀಡಿದಲ್ಲಿ ತರಬೇತಿಯು ಅಷ್ಟು ಪರಿಣಾಮಕಾರಿಯಾಗುವುದಿಲ್ಲ.

4) ಮತಗಟ್ಟೆ ಸಿಬ್ಬಂದಿಯು ಆಯೋಗದ ನಿರ್ದೇಶನದಂತೆ ಮತದಾನದ ನಿರ್ವಹಣೆ ಮಾಡುವ ಬಗ್ಗೆ, ವಿದ್ಯುನ್ಮಾನ ಮತಯಂತ್ರಗಳ ಬಳಕೆಯ ಬಗ್ಗೆ, ನಮೂನೆ ಮತ್ತು ಲಕೋಟೆಗಳನ್ನು ಸಿಬ್ಬಂದಿಯು ಭರ್ತಿ ಮಾಡುವ ಬಗ್ಗೆ ತರಬೇತಿಯನ್ನು ನೀಡತಕ್ಕದ್ದು.

**32) ವಿದ್ಯುನ್ಮಾನ ಮತಯಂತ್ರಗಳು**

ಚುನಾವಣಾ ವೀಕ್ಷಕರು ಇ.ವಿ.ಎಂ.ಗಳ ಲಭ್ಯತೆ ಮತ್ತು ಅವುಗಳನ್ನು ಬಿ.ಇ.ಎಲ್. ಸಂಸ್ಥೆಯಿಂದ ಪರಿಶೀಲಿಸಿ, ಮತಯಂತ್ರಗಳು ಸುಸ್ಥಿತಿಯಲ್ಲಿರುವ ಬಗ್ಗೆ ದೃಢೀಕರಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಮತಯಂತ್ರಗಳ ಮೂಲಕ ಯಾವುದೇ ರೀತಿಯ ಅಕ್ರಮಗಳು ಆಗದಂತೆ ತಡೆಗಟ್ಟಲು ಮತಯಂತ್ರಗಳ ರ್‍ಯಾಂಡಮೈಸೇಷನ್ ಪ್ರಕ್ರಿಯೆಗಳನ್ನು ಎರಡು ಹಂತಗಳಲ್ಲಿ ಮಾಡಿರುವ ಬಗ್ಗೆ ಪರಿಶೀಲಿಸುವುದು.

**33) ಮತದಾನ ದಿನಾಂಕಕ್ಕೆ ಸಂಬಂಧಿಸಿದ ತಯಾರಿ:–**

ಮತಗಟ್ಟೆಗಳ ವಶಪಡಿಸಿಕೊಳ್ಳುವಿಕೆ, ಮೋಸದಿಂದ ಹಸ್ತಕ್ಷೇಪ ಮಾಡುವಿಕೆ ಮತ್ತು ಮತದಾರರಿಗೆ ಭಯ ಮತ್ತು ಹೆದರಿಕೆ ಹುಟ್ಟಿಸುವ ಮತದಾರರು ಮತ ಚಲಾಯಿಸಲು ಬಿಡದೇ ಇರುವಂತಹ ಚುನಾವಣಾ ಅಕ್ರಮ ಮತ್ತು ಮತದಾನ ಪ್ರಕ್ರಿಯೆಯನ್ನು ಹಾಳು ಮಾಡುವ ವಿಷಯಗಳು ಅತ್ಯಂತ ಪ್ರಮುಖವಾದದ್ದು.

ಚುನಾವಣಾ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸುವ ಸಮಾಜಘಾತುಕ ವ್ಯಕ್ತಿಗಳು ಅನುಸರಿಸುವ ಮಾರ್ಗಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಚುನಾವಣಾ ವೀಕ್ಷಕರು ಅಂತಹ ವ್ಯಕ್ತಿಗಳನ್ನು ಮತ್ತು ಅಂತಹ ಪ್ರದೇಶಗಳನ್ನು ಗುರುತಿಸುವುದು.

ಮತದಾನದ ದಿನದಂದು ಅಂತಹ ಪ್ರದೇಶಗಳಲ್ಲಿ ಚುನಾವಣಾ ಅಕ್ರಮ ನಡೆಯದಂತೆ ತಡೆಯಲು ಎಲ್ಲಾ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**34) ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ:–**

ಚುನಾವಣಾ ವೀಕ್ಷಕರು, ಮತಗಟ್ಟೆ ಸಿಬ್ಬಂದಿಗಳು ಅವರಿಗೆ ನೇಮಿಸಲಾದ ಮತಗಟ್ಟೆಗಳಿಗೆ ತೆರಳುವ ಮುನ್ನ ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ಮಸ್ಟರಿಂಗ್ ಕಾರ್ಯವನ್ನು ಯಾವ ರೀತಿಯಲ್ಲಿ ನಡೆಸಲಾಗಿದೆ ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ಕಳುಹಿಸಬೇಕಾಗುತ್ತದೆ. ಅವರು ಮತಗಟ್ಟೆ ಸಿಬ್ಬಂದಿಗಳಿಗೆ ಮತಗಟ್ಟೆಗಳನ್ನು ಹಂಚಿಕೆ ಮಾಡಲು ರ್‍ಯಾಂಡಮೈಸೇಷನ್ ಕ್ರಮವನ್ನು ಅನುಸರಿಸಿ ಮಾಡಲಾಗಿದೆಯೇ ಎಂದು ಪರಿಶೀಲಿಸತಕ್ಕದ್ದು.

**35) ಮೈಕ್ರೋ ಅಬ್ಸರ್‌ವರ್ಸ್:–**

ಮೈಕ್ರೋ ಅಬ್ಸರ್‌ವರ್ಸ್ ಮತದಾನದ ದಿನದಂದು ಮತದಾನದ ಪ್ರಕ್ರಿಯೆಗಳನ್ನು ವೀಕ್ಷಿಸತಕ್ಕದ್ದು. ಇವರುಗಳನ್ನು ಮತಗಟ್ಟೆಗಳಿಗೆ ಹಂಚಿಕೆ ಮಾಡಬೇಕು. ಇವರುಗಳು ಮತಗಟ್ಟೆ ಸಿಬ್ಬಂದಿಯ ತಂಡದ ಭಾಗವಾಗಿದ್ದು ಇವರು ಹಂಚಿಕೆ ಮಾಡಲಾದ ಮತಗಟ್ಟೆಗಳಲ್ಲಿ ಕುಳಿತುಕೊಳ್ಳಬೇಕು. ಅಣಕು ಮತದಾನ ನಡೆಸುವ ಮೊದಲು ಮತಗಟ್ಟೆಗಳಲ್ಲಿ ಮೈಕ್ರೋ ಅಬ್ಸರ್‌ವರ್ ಹಾಜರಿರತಕ್ಕದ್ದು ಮತ್ತು ಇವರು ಮತದಾನದ ಬಗ್ಗೆ ವರದಿಯನ್ನು ಅವರಿಗೆ ನೀಡಲಾದ ನಮೂನೆಯಲ್ಲಿ ನೀಡತಕ್ಕದ್ದು.

ಮೈಕ್ರೋ ಅಬ್ಸರ್‌ವರ್ಸ್‌ಗೆ ತರಬೇತಿಯನ್ನು ಚುನಾವಣಾಧಿಕಾರಿಗಳ ನೆರವಿನೊಂದಿಗೆ ಮತದಾನದ ದಿನಾಂಕಕ್ಕಿಂತ ಎರಡು ದಿನಗಳ ಮೊದಲು ಚುನಾವಣಾ ವೀಕ್ಷಕರು ನೀಡತಕ್ಕದ್ದು ನಂತರ ಅವರನ್ನು ಸೂಕ್ಷ್ಮ ಮತಗಟ್ಟೆಗಳಿಗೆ ನಿಯೋಜಿಸತಕ್ಕದ್ದು. ಮೈಕ್ರೋ ಅಬ್ಸರ್‌ವರ್ ಕೇಂದ್ರ ಸ್ಥಳದಲ್ಲಿ ಇರುವಂತೆ ಮೊದಲೇ ವ್ಯವಸ್ಥೆಯನ್ನು ಮಾಡಿ ಅಗತ್ಯಾನುಸಾರ ಅವರಿಗೆ ಹಂಚಿಕೆ ಮಾಡಲಾದ ಮತಗಟ್ಟೆಗಳಿಗೆ ಕೇಂದ್ರ ಸ್ಥಾನದಿಂದ ತೆರಳುವಂತೆ ಮಾಡುವುದು.

ಎಲ್ಲಾ ಸೂಕ್ಷ್ಮ ಮತಗಟ್ಟೆಗಳು ಮೈಕ್ರೋ ಅಬ್ಸರ್‌ವರ್‌ರಿಂದ ಕೂಡಿರತಕ್ಕದ್ದಲ್ಲ. ಇವರುಗಳನ್ನು ಪರಿಣಾಮಕಾರಿಯಾಗಿ ಅಗತ್ಯಾನುಸಾರ ಬಳಸಬೇಕು. ಮೈಕ್ರೋ ಅಬ್ಸರ್‌ವರ್‌ಗಳು ಬಹು ದೂರದ ಸ್ಥಳಗಳಲ್ಲಿ ಕರ್ತವ್ಯಕ್ಕೆ ತೆರಳಬೇಕಾದಲ್ಲಿ ಅವರನ್ನು ಮತಗಟ್ಟೆ ಸಿಬ್ಬಂದಿಯೊಂದಿಗೆ ಕಳುಹಿಸತಕ್ಕದ್ದು.

**36) ವಿಶೇಷ ವೀಕ್ಷಕರು**

ವಿಶೇಷ ಸಂದರ್ಭಗಳಲ್ಲಿ ರಾಜ್ಯ ಚುನಾವಣಾ ಆಯೋಗವು ಕೆಲವು ವಾರ್ಡುಗಳಿಗೆ ಖಚಿತ ಕಾರ್ಯಸೂಚಿಯೊಂದಿಗೆ ಕಾರ್ಯನಿರ್ವಹಿಸಲು ವಿಶೇಷ ವೀಕ್ಷಕರನ್ನು ಕಳುಹಿಸಬಹುದಾಗಿರುತ್ತದೆ. ಈ ವಿಶೇಷ ವೀಕ್ಷಕರು ವಾರ್ಡುಗಳಲ್ಲಿ ಕರ್ತವ್ಯ ನಿರ್ವಹಿಸುವ ವೀಕ್ಷಕರಿಗೆ ಸರಿಸಮಾನವಾದ ಅಧಿಕಾರವನ್ನು ಹೊಂದಿದವರಾಗಿರುತ್ತಾರೆ. ಇವರುಗಳು ಇತರ ವೀಕ್ಷಕರ ಮೇಲೆ ಮೇಲ್ವಿಚಾರಣೆ ನಡೆಸದೆ ನೇರವಾಗಿ ಆಯೋಗಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು. ಇವರುಗಳು ಅವಶ್ಯಕವಿರುವ ಮಾಹಿತಿಗಳನ್ನು ಮತ್ತು ವಾರ್ಡಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಆ ವಾರ್ಡಿನ ಚುನಾವಣಾ ವೀಕ್ಷಕರೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳತಕ್ಕದ್ದು.

**37) ಮತದಾನ ದಿನದ ಚಟುವಟಿಕೆಗಳು:**

1) ಮತದಾನದ ದಿನದಂದು ಮತದಾನ ಪ್ರಕ್ರಿಯೆಯನ್ನು ಉಸ್ತುವಾರಿ ಮಾಡುವುದು ಒಂದು ಪ್ರಮುಖ ಕರ್ತವ್ಯ. ವೀಕ್ಷಕರು ಅಂದು ಸಾಧ್ಯವಾದಷ್ಟು ಗರಿಷ್ಠ ಸಂಖ್ಯೆಯ ಮತಗಟ್ಟೆಗಳಿಗೆ ಮತದಾನದ ವೇಳೆಯಲ್ಲಿ ಭೇಟಿ ನೀಡಬೇಕು. ಮತದಾನ ದಿನದಂದು ಕ್ಷೇತ್ರದಲ್ಲಿ ವೀಕ್ಷಕರ ಹಾಜರಾತಿ ಹಾಗೂ ಮತಗಟ್ಟೆಗಳಿಗೆ ಭೇಟಿ ನೀಡಿ ಚುನಾವಣಾ ಅಕ್ರಮ ಹಾಗೂ ಮತದಾನ ಕಲುಷಿತಗೊಳ್ಳುವುದನ್ನು ತಡೆಗಟ್ಟುವಂತಿರಬೇಕು. ವೀಕ್ಷಕರು ಸಂಬಂಧಿಸಿದ ಚುನಾವಣಾ ಅಧಿಕಾರಿ ಮತ್ತಿತರ ಆಡಳಿತ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಬೇಕು.

2) ಪ್ರಿಸೈಡಿಂಗ್ ಅಧಿಕಾರಿಗಳು ಮತದಾನ ದಿನದಂದು ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟ್‌ರುಗಳ ಎದುರು ಅಣಕು ಮತದಾನ ನಡೆಸುವುದು ಹಾಗೂ ವಿದ್ಯುನ್ಮಾನ ಮತಯಂತ್ರವು ಸಮರ್ಪಕವಾಗಿ ಕಾರ್ಯಮಾಡುತ್ತಿದೆ ಎಂದು ಪರಿಶೀಲಿಸುವುದು ಕಡ್ಡಾಯ. ಮತಗಟ್ಟೆ ಅಧಿಕಾರಿಗಳು ಅಣಕು ಮತದಾನ ನಡೆಸಿ ಪೋಲಿಂಗ್ ಏಜೆಂಟರುಗಳ ಸಹಿಯನ್ನು ಸರ್ಟಿಫಿಕೇಟ್‌ನಲ್ಲಿ ಪಡೆದಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

3) ಮತಗಟ್ಟೆಯ ಹೊರಗೆ ಮತದಾನ ಪ್ರಕ್ರಿಯೆಯನ್ನು ಹಾಳು ಮಾಡುವಂತಹ, ಮುಕ್ತ, ನ್ಯಾಯಯುತ ಮತದಾನಕ್ಕೆ ಅಡ್ಡಿಪಡಿಸುವಂತಹ ಚುನಾವಣಾ ಅಕ್ರಮಗಳೇನಾದರೂ ನಡೆಯುತ್ತಿದೆಯೆ ಎಂಬುದನ್ನು ಗಮನಿಸುವುದು. ವೀಕ್ಷಕರು ಆ ವ್ಯಾಪ್ತಿಯ ಯಾವುದೇ ಮತಗಟ್ಟೆಗಳಲ್ಲಿ ಹಿಂದಿನ ಚುನಾವಣೆಗಳಲ್ಲಿ ಅಹಿತಕರ ಘಟನೆ, ಚುನಾವಣೆ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ಪಡೆಯುವುದು ಉತ್ತಮ. ಅವರು DEO/RO, ARO ರವರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಇದರಿಂದ ಅವರು ವೀಕ್ಷಿಸಿದ ಯಾವುದಾದರೂ ಕಾನೂನು ಬಾಹಿರ ಘಟನೆಗಳ ಬಗ್ಗೆ ಶೀಘ್ರವಾಗಿ ಕೈಗೊಳ್ಳಬೇಕಾದ ನಿವಾರಣಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಬಹುದಾಗಿರುತ್ತದೆ.

4) ಮತಗಟ್ಟೆಯೊಳಗೆ ಪ್ರವೇಶಿಸಿ ಮತದಾನದ ಪ್ರಗತಿಯನ್ನು ಪರಿಶೀಲಿಸುವುದು, ಹಾಗೂ ಮತಗಟ್ಟೆ ಅಧಿಕಾರಿಗಳು ಮತದಾನಕ್ಕೆ ನಿಗದಿಪಡಿಸಿರುವ ವಿಧಿ–ವಿಧಾನಗಳನ್ನು ಪಾಲಿಸುತ್ತಿದ್ದಾರೆಯೇ ಎಂಬುದನ್ನು ಹಾಗೂ ಪೋಲಿಂಗ್ ಏಜೆಂಟರ ಹಾಜರಾತಿಯನ್ನು, ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯಲ್ಲಿನ ಅಂಶಗಳನ್ನು ಕಾಲ ಕಾಲಕ್ಕೆ ಸರಿಯಾಗಿ ಭರ್ತಿ ಮಾಡುತ್ತಿದ್ದಾರೆಯೇ ಎಂಬುದನ್ನು ಹಾಗೂ ಮತದಾನದ ಇನ್ನಿತರ ಪ್ರಕ್ರಿಯೆಗಳನ್ನು ಪರಿಶೀಲಿಸುವುದು. ಮತದಾರರ ರಿಜಿಸ್ಟರನ್ನು ಹಾಗೂ ವಿದ್ಯುನ್ಮಾನ ಮತಯಂತ್ರದಲ್ಲಿ ದಾಖಲಾಗಿರುವ ಮತ ಸಂಖ್ಯೆಗಳನ್ನು ಪರಿಶೀಲಿಸುವುದು ಹಾಗೂ ವಿಸಿಟ್ ಶೀಟ್‌ನಲ್ಲಿ ಭೇಟಿ ನೀಡಿದ ಸಮಯ ನಮೂದಿಸಿ ಸಹಿ ಮಾಡುವುದು.

5) ಮತದಾನದ ಮುಕ್ತಾಯದ ನಂತರ ವಿದ್ಯುನ್ಮಾನ ಮತಯಂತ್ರಗಳನ್ನು ಹಾಗೂ ಮತದಾನ ಸಿಬ್ಬಂದಿಯನ್ನು ಮತದಾನ ಪರಿಕರಗಳೊಂದಿಗೆ ಸೂಕ್ತ ಭದ್ರತೆಯೊಂದಿಗೆ ಸಂಗ್ರಹಣಾ ಸ್ಥಳಕ್ಕೆ ಯಾವುದೇ ಅಡೆತಡೆ ಇಲ್ಲದೆ ಸಾಗಿಸಲು ಮಾಡಿರುವ ಏರ್ಪಾಟನ್ನು ಪರಾಮರ್ಶಿಸುವುದು. ಮತದಾನ ಸಿಬ್ಬಂದಿ ಮತಯಂತ್ರದೊಂದಿಗೆ ಹೊರಟನಂತರ ತಮಗೆ ಸೂಚಿಸಿರುವ ಭದ್ರತಾ ಕೊಠಡಿ ಬಳಿ ಮಾತ್ರ ನಿಲ್ಲುವುದು.

6) ದಾಖಲಿಸಿದ ಮತಗಳ ಲೆಕ್ಕವನ್ನು ಪ್ರಪತ್ರ-20(EVM)ನಲ್ಲಿ ಸರಿಯಾಗಿ ಮತ್ತು ಪೂರ್ಣವಾಗಿ ನಮೂದಿಸಿ ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯೊಂದಿಗೆ ನೀಡಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳುವುದು.

**38) ಸ್ವೀಕರಿಸುವ ಕೇಂದ್ರದಲ್ಲಿ (ಡಿಮಸ್ಟರಿಂಗ್)ವಿಶೇಷ ಕೌಂಟರ್ ಗಳನ್ನು ಸ್ಥಾಪಿಸುವ ಬಗ್ಗೆ:**

ಈ ಕೆಳಕಂಡ ಮತಗಟ್ಟೆಗಳ ಬಗ್ಗೆ ಹೆಚ್ಚಿನ ಗಮನಹರಿಸಬೇಕು

i. ಮತಯಂತ್ರಗಳ ವೈಪಲ್ಯದಿಂದಾಗಿ ಮತದಾನವನ್ನು ತಾತ್ಕಾಲಿಕವಾಗಿ ಮುಂದೂಡಿದ ಮತಗಟ್ಟೆಗಳು

ii. ತೀವ್ರತರವಾದ ದೂರುಗಳು ಬಂದಿರುವ ಮತಗಟ್ಟೆಗಳು

iii. ಅಣಕು ಮತದಾನ ನಡೆಸಿದ ಬಗ್ಗೆ ಸರ್ಟಿಫಿಕೇಟನ್ನು ನೀಡದಿರುವ ಮತಗಟ್ಟೆಗಳು.

ಚುನಾವಣಾಧಿಕಾರಿರವರು ಮೇಲೆ ವಿವರಿಸಿರುವ ಎಲ್ಲಾ ಮತಗಟ್ಟೆಗಳ ಪಟ್ಟಿಯನ್ನು ತಯಾರಿಸಿ DEO ರವರಿಗೆ ಹಾಗೂ ವೀಕ್ಷಕರಿಗೆ ಸಲ್ಲಿಸುವುದಲ್ಲದೆ ಅಂತಹ ಮತಗಟ್ಟೆಗಳ EVM ಮತ್ತು ಚುನಾವಣಾ ಕಾಗದ ಪತ್ರಗಳನ್ನು ವಿಶೇಷ ಕೌಂಟರ್‌ಗಳಲ್ಲಿ ಸ್ವೀಕರಿಸಬೇಕು. ಮಾಮೂಲಿ ಕೌಂಟರ್‌ಗಳಲ್ಲಿ ಸ್ವೀಕರಿಸುವಂತಿಲ್ಲ ಅಂತಹ ಮತಗಟ್ಟೆಗಳಿಗೆ ಸಂಬಂದಿಸಿದ ಪ್ರಿಸೈಡಿಂಗ್ ಅಧಿಕಾರಿ ದಿನಚರಿಯನ್ನು ಕೂಲಂಕಷವಾಗಿ ಪರಿಶೀಲಿಸುವುದು.

**39) ಮತದಾರರ ರಿಜಿಸ್ಟರ್ ಮತ್ತು ಇತರೆ ದಾಖಲೆಗಳ ಪರಿಶೀಲನೆ:**

ಚುನಾವಣಾ ಅಕ್ರಮಗಳು ನಡೆದಿರುವ ಬಗ್ಗೆ ಪತ್ತೆ ಮಾಡಲು ಪ್ರಿಸೈಡಿಂಗ್ ಅಧಿಕಾರಿ ದಿನಚರಿ ಮತದಾರರ ರಿಜಿಸ್ಟರ್, ಮೈಕ್ರೋ ಅಬ್ಸರ್‌ವರ್ ವರದಿ, ವಿಸಿಟ್ ಶೀಟ್ ಇತ್ಯಾದಿಗಳನ್ನು ಮತದಾನ ನಡೆದ ನಂತರದ ದಿನದಂದು ಸಮಗ್ರವಾಗಿ 11-00 ಗಂಟೆಗೆ ಪರಿಶೀಲನೆಗೆ ಕೈಗೆತ್ತಿಕೊಳ್ಳಬೇಕು.

**40) ಮರು ಮತದಾನ ಮತ್ತು ಮತದಾನ ಮುಂದೂಡಿದ ಪ್ರಕರಣಗಳು:**

ಆಯೋಗವು ಮರುಮತದಾನಕ್ಕೆ ಆದೇಶಿಸಲು ವೀಕ್ಷಕರ ವರದಿ ಅತ್ಯಂತ ಪ್ರಮುಖವಾದ ಅಂಶವಾಗಿರುತ್ತದೆ. ಆದುದರಿಂದ ವೀಕ್ಷಕರು ತುಂಬಾ ಜಾಗರೂಕರಾಗಿ ದಕ್ಷತೆಯಿಂದ ಚುನಾವಣೆಯನ್ನು ಕಲುಷಿತಗೊಳಿಸುವ, ಕಲುಷಿತಗೊಳಸಿದ ಘಟನೆಗಳ ಬಗ್ಗೆ ವಸ್ತು ನಿಷ್ಠ ನಿಖರವಾದ ವರದಿಯನ್ನು ಆಯೋಗಕ್ಕೆ ಕಳುಹಿಸಬೇಕು. ಕೆಲವು ಬಾರಿ ಬೇರೆ ಮೂಲಗಳಿಂದ ಸ್ವೀಕರಿಸಿದ ಮಾಹಿತಿಗಳನ್ನು ವರದಿಗಾಗಿ ಬಗ್ಗೆ ವೀಕ್ಷಕರಿಗೆ ಒಪ್ಪಿಸಿದಾಗ ಆ ಬಗ್ಗೆ ಪರಿಶೀಲಿಸಿ ತನಿಖೆ ನಡೆಸಿ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಆಯೋಗಕ್ಕೆ ವಸ್ತುನಿಷ್ಠ ನೈಜ ವರದಿಯನ್ನು ನೀಡಬೇಕಿರುತ್ತದೆ. ಇದರಿಂದ ಮರು ಮತದಾನ ಅವಶ್ಯಕ ಮತ್ತು ಸೂಕ್ತ ಎಂದು ಕಂಡು ಬಂದ ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆದೇಶಿಸಲು ಸಾಧ್ಯವಾಗುತ್ತದೆ.

ಮರುಮತದಾನದಲ್ಲಿ ಯಾವುದೇ ಅಕ್ರಮಗಳು ಮರುಕಳಿಸದಂತೆ ಹಾಗೂ ಚುನಾವಣೆ ಪ್ರಕ್ರಿಯೆಗಳು ಕಲುಷಿತಗೊಳ್ಳದಂತೆ ಎಚ್ಚರ ವಹಿಸುವುದು, ಮರುಮತದಾನ ನಡೆದ ಬಗ್ಗೆ ವೀಕ್ಷಕರು ಸಮಗ್ರವಾದ ನಿರ್ದಿಷ್ಟವಾದ ವರದಿಯನ್ನು ನೀಡಬೇಕು.

**41) ಮತದಾನ ಮುಕ್ತಾಯದ ವರದಿ:**

ಮತದಾನ ಮುಕ್ತಾಯವಾದ ನಂತರ ವೀಕ್ಷಕರ ವರದಿ ನಮೂನೆ-3 ರಲ್ಲಿ ಪೋಲಿಂಗ್ ಏಜೆಂಟರ ಪಾತ್ರ, ಸ್ವೀಕರಿಸಿದ ದೂರುಗಳ ಸಂಖ್ಯೆ ಮತ್ತು ಸ್ವರೂಪದ ಬಗ್ಗೆ ವರದಿ ಸಲ್ಲಿಸುವುದು. ಇದರ ಜೊತೆಗೆ ಸಮಗ್ರವಾಗಿ ಎಲ್ಲಾ ಪ್ರಮುಖ ಅಂಶಗಳನ್ನೊಳಗೊಂಡ ವರದಿಯನ್ನು ಕಳುಹಿಸುವುದು.

**42) ಮತಗಳ ಎಣಿಕೆ:**

ಮತ ಎಣಿಕೆ ಕೇಂದ್ರಗಳಿಗೆ ಭೇಟಿ ನೀಡಿ ಎಣಿಕೆ ಕಾರ್ಯ ಸುಗಮವಾಗಿ ಶಾಂತಿಯುತವಾಗಿ ನಡೆಯಲು ಯಾವುದಾದರೂ ವ್ಯವಸ್ಥೆಗಳನ್ನು ಕಲ್ಪಿಸುವುದು ಅವಶ್ಯವೆಂದು ಕಂಡು ಬಂದಲ್ಲಿ ಅವುಗಳನ್ನು ಕೈಗೊಳ್ಳಲು ಜಿಲ್ಲಾ ಚುನಾವಣಾಧಿಕಾರಿ/ಚುನಾವಣಾಧಿಕಾರಿ ರವರಿಗೆ ತಿಳಿಸುವುದು.

ಎಣಿಕೆ ಕೇಂದ್ರಗಳಲ್ಲಿ ವೀಕ್ಷಕರಿಗೆ ಹಾಗೂ ಮಾಧ್ಯಮದವರಿಗೆ ಪ್ರತ್ಯೇಕವಾಗಿ ವ್ಯವಸ್ಥೆಗಳನ್ನು ಕಲ್ಪಿಸುವುದು ಅವಶ್ಯ. ವೀಕ್ಷಕರು ಫಲಿತಾಂಶಗಳನ್ನು ಶೀಘ್ರವಾಗಿ ಪ್ರಕಟಿಸಲು ಹಾಗೂ ಆಯೋಗಕ್ಕೆ ವರದಿ ಮಾಡಲು ಸೂಕ್ತ ವ್ಯವಸ್ಥೆಗಳನ್ನು ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.

ಮತ ಎಣಿಕೆ ಕಾರ್ಯವನ್ನು ಬಹಳ ಎಚ್ಚರಿಕೆಯಿಂದ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ನಡೆಸತಕ್ಕದ್ದು. ಎಣಿಕೆ ಕಾರ್ಯದ ವರದಿಯನ್ನು ಶೀಘ್ರವಾಗಿ ಆಯೋಗಕ್ಕೆ ವರದಿ ಮಾಡುವುದು. ವೀಕ್ಷಕರು ಎಣಿಕೆ ಕಾರ್ಯದ ಉಸ್ತುವಾರಿಯಲ್ಲಿ ಮುಖ್ಯ ಪಾತ್ರವಹಿಸಬೇಕೆಂದು ಆಯೋಗವು ಆಶಿಸುತ್ತದೆ.

ಎಣಿಕೆ ದಿನದಂದು ಮತ ಎಣಿಕೆ ಪ್ರಾರಂಭಕ್ಕೆ ಮುನ್ನ ನಿಯೋಜಿತಗೊಂಡಿರುವ ಎಣಿಕೆ ಸಿಬ್ಬಂದಿಗಳನ್ನು ಬೆಳಿಗ್ಗೆ ರ್‍ಯಾಂಡಮೈಸೇಶನ್ ಮಾಡುವುದು. ಎಣಿಕೆ ಕಾರ್ಯವು ಸುಲಲಿತವಾಗಿ ಹಾಗೂ ದಕ್ಷತೆಯಿಂದ ನಿರ್ವಹಿಸುವುದರ ಜೊತೆಗೆ ಪಾರದರ್ಶಕ ಮತ್ತು ಸ್ಪಷ್ಟವಾಗಿರುವಂತೆ ವ್ಯವಸ್ಥಿತ ಏರ್ಪಾಡುಗಳನ್ನು ಮಾಡಿರುವ ಕುರಿತು ಖಚಿತಪಡಿಸಿಕೊಳ್ಳುವುದು.

ಅಭ್ಯರ್ಥಿಗಳಿಗೆ/ ಎಣಿಕೆ ಏಜೆಂಟರುಗಳಿಗೆ ಎಣಿಕೆ ಕಾರ್ಯದ ಸ್ಪಷ್ಟ ಚಿತ್ರಣ ಪಡೆಯಲು ಮುಕ್ತ ಅವಕಾಶವನ್ನು ನೀಡುವುದು. ಅವರಿಗೆ ಯಾವುದೇ ಅನುಮಾನಕ್ಕೆ ಅವಕಾಶ ನೀಡಬಾರದು. ಎಣಿಕೆ ಕೇಂದ್ರಗಳ ಸ್ಥಾಪನೆ ಮತ್ತು ಏರ್ಪಾಡುಗಳ ಬಗ್ಗೆ ಆಯೋಗವು ಸೂಚನೆಗಳನ್ನು/ಮಾರ್ಗಸೂಚಿ ಗಳನ್ನು ನೀಡಿರುತ್ತದೆ. ಎಣಿಕೆ ಕೇಂದ್ರಗಳ ಆಯ್ಕೆಗೆ ನಿರ್ದಿಷ್ಟ ಅಳತೆಗೋಲು ಹಾಗೂ ಎಣಿಕೆ ಕಾರ್ಯದ ನಿರ್ವಹಣೆ ಬಗ್ಗೆ ಸೂಚನೆಗಳನ್ನು ನೀಡಿರುತ್ತದೆ. ಪ್ರತಿಯೊಂದು ಸುತ್ತಿನ ಎಣಿಕೆ ಫಲಿತಾಂಶದ ಪಟ್ಟಿಯನ್ನು ನಿಖರ ಹಾಗೂ ಕರಾರುವಾಕ್ಕಾಗಿ ತಯಾರಿಸಿರುವುದನ್ನು DEO/RO ಹಾಗೂ ವೀಕ್ಷಕರು ಪರಿಶೀಲಿಸಿ, ಪ್ರತಿಯೊಬ್ಬ ಅಭ್ಯರ್ಥಿಯ ಪ್ರತಿಯೊಂದು ಎಣಿಕೆ ಟೇಬಲಿನಲ್ಲಿ ಪಡೆದ ಮತಗಳು, ದಾಖಲಿಸಿದ ಮತಗಳ ಪಟ್ಟಿ ಪ್ರಪತ್ರ 20 (EVM) ನ ಭಾಗ– II ರಲ್ಲಿ ನಮೂದಿಸಿರುವ ಸಂಖ್ಯೆಗಳಿಗೆ ತಾಳೆಯಾಗುವುದನ್ನು ಖಾತ್ರಿ ಪಡಿಸಿಕೊಳ್ಳುವುದು. ಅವರು ಪ್ರತಿಯೊಂದು ಎಣಿಕೆ ಟೇಬಲ್‌ನ ಒಟ್ಟು ಮತಗಳ ಲೆಕ್ಕದ ಕೆಳಗೆ ಸಹಿಮಾಡಬೇಕು. ವೀಕ್ಷಕರು ಟೇಬಲ್‌ವಾರು ಮತಗಟ್ಟೆವಾರು ಹಾಗೂ ಪ್ರತಿ ಸುತ್ತಿನ ಮತಗಳ ವಿಂಗಡಣೆಯ ಪಟ್ಟಿಯ ಪ್ರತಿಯನ್ನು ಒಂದು ಫೈಲಿನಲ್ಲಿ ನಿರ್ವಹಿಸತಕ್ಕದ್ದು.

ಪ್ರತಿಸುತ್ತಿನ ಎಣಿಕೆ ಮುಗಿದ ನಂತರ ವ್ಯವಸ್ಥಿತ ರೀತಿಯಲ್ಲಿ ತಾಳೆನೋಡುವುದು. ಸುತ್ತುವಾರು ಎಣಿಕೆ ಪ್ರಗತಿಯನ್ನು ಎಣಿಕೆ ಜವಾಬ್ದಾರಿ ಹೊಂದಿರುವ A.R.O ಎಣಿಕೆ ಕೋಣೆಯೊಳಗೆ ಪ್ರಕಟಿಸುವರು. ಆಯ್ಕೆಯಾದ ಅಭ್ಯರ್ಥಿಯನ್ನು ಚುನಾವಣಾಧಿಕಾರಿಗಳು ಘೋಷಿಸಿದ ಕೂಡಲೇ ಸಂಬಂಧಿಸಿದ ಎಲ್ಲಾ ದಾಖಲೆ ಪತ್ರಗಳಿಗೆ ಚುನಾವಣಾಧಿಕಾರಿ ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳುವುದು.

**43) ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೆಟ್‌ಗೆ ಅಳವಡಿಸುವುದು.**

ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೈಟ್‌ಗೆ ಅಳವಡಿಸುವುದಕ್ಕಾಗಿ ಒಬ್ಬ ತಾಂತ್ರಿಕ ಪರಿಣಿತಿ ಇರುವ ಸಹಾಯಕರು ಚುನಾವಣಾಧಿಕಾರಿಗೆ ಸಹಾಯ ಮಾಡುವರು. ಅಂತಿಮ ಫಲಿತಾಂಶದ ಮಾಹಿತಿಯು ತಂತಾನೆ ಅಂತರ್ಜಾಲದಲ್ಲಿ **Upload** ಆಗುವುದರಿಂದ, ಎಣಿಕೆ ದಿನದಂದು ಯಾವುದೇ ತಪ್ಪಾದ ಮಾಹಿತಿಯನ್ನು ಕಳುಹಿಸದಂತೆ ಎಚ್ಚರಿಕೆ ವಹಿಸುವುದು ಅತ್ಯವಶ್ಯಕ. ಅಂತಿಮ ಫಲಿತಾಂಶ ಘೋಷಣೆಯಾದ ನಂತರ ಚುನಾವಣಾಧಿಕಾರಿಗಳು

1) ಅಂತಿಮ ಫಲಿತಾಂಶದ ಪಟ್ಟಿ ಪ್ರಪತ್ರ –23

2) ಫಲಿತಾಂಶ ಘೋಷಣೆ ಪ್ರಪತ್ರ–24

3) ಚುನಾವಣಾ ವರದಿ ಪ್ರಪತ್ರ–25

ಇವುಗಳನ್ನು ಕ್ರಮವಾಗಿ ಭರ್ತಿ ಮಾಡಿ ಆಯೋಗಕ್ಕೆ ಕಳುಹಿಸುವುದನ್ನು ಖಾತ್ರಿಪಡಿಸಿ ಕೊಳ್ಳುವುದು. ಮುಂದಿನ ಯಾವುದೇ ವ್ಯವಹರಣೆಗಳಿಗೆ ಹಾಗೂ ದಾಖಲೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ನಾಮಪತ್ರದಲ್ಲಿ

ನಮೂದಿಸಿದ ಹೆಸರು ಮಾತ್ರ ಸಿಂಧುವಾಗುತ್ತದೆಂಬುದನ್ನು ಗಮನ ದಲ್ಲಿರಿಸಿಕೊಳ್ಳುವುದು. ಅಭ್ಯರ್ಥಿಗಳು ನಾಮಪತ್ರದಲ್ಲಿ ನಮೂದಿಸಿದಂತೆಯೇ ಹೆಸರುಗಳ ಅಕ್ಷರಗಳನ್ನು ಪ್ರಪತ್ರ–7 ರಲ್ಲಿ ನಮೂದಿಸಿರಬೇಕು. ಚುನಾವಣಾಧಿಕಾರಿ ಯಾವುದಾದರೂ ಅಭ್ಯರ್ಥಿಗಳ ಹೆಸರನ್ನು ಸ್ವಲ್ಪ ಬದಲಾವಣೆ ಮಾಡಿ ನಮೂದಿಸಲು ಅನುಮತಿಸಿದ್ದಲ್ಲಿ ಅದೇ ರೀತಿಯಲ್ಲಿ ಹೆಸರನ್ನು ಅಂತಿಮ ಫಲಿತಾಂಶದ ಪಟ್ಟಿ ಪ್ರಪತ್ರ–23, ಫಲಿತಾಂಶ ಘೋಷಣೆ ಪಟ್ಟಿ ಪ್ರಪತ್ರ–24, ಇವೆಲ್ಲವುಗಳಲ್ಲಿಯೂ ನಮೂದಿಸಿರಬೇಕು. ಈ ಅಂಶದ ಬಗ್ಗೆ ವೀಕ್ಷಕರು ಚುನಾವಣಾಧಿಕಾರಿಗಳಿಗೆ ತಿಳಿಸಬೇಕು ಹಾಗೂ ಇದನ್ನು ಪಾಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.

**44. ಚುನಾವಣಾ ವೆಚ್ಚದ ಲೆಕ್ಕಪತ್ರಗಳು**

**44.1 ಪರಿಚಯ**

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಕಲಂ 26A ಪ್ರಕಾರ ಮಹಾನಗರ ಪಾಲಿಕೆಯ ಕೌನ್ಸಿಲರ್ ಸ್ಥಾನಕ್ಕೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯಾಗಲಿ ಅಥವಾ ಅವನ ಚುನಾವಣಾ ಏಜೆಂಟ್‌ನಾಗಲಿ ಒಂದು ಪ್ರತ್ಯೇಕ ಮತ್ತು ಸರಿಯಾದ ಲೆಕ್ಕಪತ್ರವನ್ನು ಚುನಾವಣೆಗೆ ಸಂಬಂಧಿಸಿದಂತೆ ನಾಮನಿರ್ದೇಶನ ಪತ್ರ ನೀಡಿದ ದಿನಾಂಕದಿಂದ ಚುನಾವಣೆ ಫಲಿತಾಂಶ ಘೋಷಣೆಯ ದಿನಾಂಕದವರೆಗೆ ಮಾಡಲಾದ ಖರ್ಚುಗಳ ಬಗ್ಗೆ ಇಡಬೇಕಾಗಿರುತ್ತದೆ.

1. ಮುಂದುವರಿದಂತೆ ಸದರಿ ಅಧಿನಿಯಮದ ಕಲಂ 26 ಬಿ ಪ್ರಕಾರ ಪ್ರತಿಯೊಬ್ಬ ಅಭ್ಯರ್ಥಿಯು ಅಂತಹ ಲೆಕ್ಕ ಪತ್ರದ ಒಂದು ಯಥಾ ಪ್ರತಿಯನ್ನು ಫಲಿತಾಂಶ ಘೋಷಿಸಿದ 30 ದಿನಗಳೊಳಗಾಗಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.
